ಸಂಪುಟ: 04 ಸಂಚಿಕೆ: 122 ಪುಟಗಳು: 08 ಸೋಮವಾರ 15 ಜುಲೈ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ವಿಸ್ತಾರವಾಗುತ್ತ ಹೋಗುವುದು ಜೀವನ. ಸಂಕುಚಿತವಾಗುತ್ತ ಸಾಗುವುದೇ ಸಾವು. ಪ್ರೀತಿಯೇ ಜೀವನ, ದ್ವೇಷವೇ ಸಾವು.

# ತಮಿಳುನಾಡಿಗೆ ನೀರು ಕಾವೇರಿ ವಿವಾದ ಶುರು

ನೀರು ಬಿಡದಿರಲು ಸರ್ಕಾರ ನಿರ್ಧಾರ



1 ತಮಿಳುನಾಡಿಗೆ ಕಾವೇರಿ ನೀರು ಬಿಡಲು ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶದ ಹಿನ್ನೆಲೆ ಸರ್ವಪಕ್ಷಗಳ ಸಭೆ.

2 ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ವಪಕ್ಷಗಳ ಮುಖಂಡ ಸಭೆಯಲ್ಲಿ ಬಿಜೆಪಿ ಕಾಂಗ್ರೆಸ್ ಜೆಡಿಎಸ್ ನಾಯಕರು ಭಾಗಿ.

3 ಜುಲೈ 12 ರಿಂದ ಜುಲೈ 31 ರ ಅವಧಿಯಲ್ಲಿ ಪ್ರತಿನಿತ್ಯ 1 ಟಿಎಂಸಿ ನೀರು

4 ತಮಿಳುನಾಡಿಗೆ ಬಿಡುಗಡೆ ಮಾಡುವಂತೆ ಆದೇಶವನ್ನು ಕಾವೇರಿ ನೀರು ನಿರ್ವಹಣ ಸಮಿತಿ ಆದೇಶಿಸಿತ್ತು.

**ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ವಪಕ್ಷ ಸಭೆ,**

**ತಮಿಳುನಾಡಿಗೆ 1 ಟಿಎಂಸಿ ಬದಲಿಗೆ ನಿತ್ಯ 8000 ಕ್ಯುಸೆಕ್ ಕಾವೇರಿ ನೀರು ಬಿಡಲು ತೀರ್ಮಾನ**

### ತಮಿಳುನಾಡಿನ ವಾದ ಏನಿತ್ತು..

ಹಿಂದಿನ ಜಲ ವರ್ಷದಲ್ಲಿ, ಫೆ.2024 ರಿಂದ ಮೇ 2024ರ ಅವಧಿಗೆ ಕರ್ನಾಟಕವು ಪರಿಸರದ ಹರಿವನ್ನು ಬಿಡುಗಡೆ ಮಾಡಿರುವುದಿಲ್ಲ. ಪ್ರಸಕ್ತ ಜಲ ವರ್ಷದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ. ಕರ್ನಾಟಕವು ಸಾಮಾನ್ಯ ಒಳಹರಿವನ್ನು ಪಡೆದಿದೆ. ಸುಪ್ರೀಂ ಕೋರ್ಟ್ ಮಾರ್ಪಡಿಸಿದಂತೆ ಆದೇಶದಂತೆ ಕರ್ನಾಟಕವು ಬಿಳಿಗುಂಡ್ಲುವಿನಲ್ಲಿ ನಿಗದಿತ ಹರಿವನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಮಿಳುನಾಡು ವಾದ ಮಂಡಿಸಿತ್ತು. ಜೂ.1ರಿಂದ ಆ.9ರವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವು 41.651 ಟಿ.ಎಂ.ಸಿ ಇರುತ್ತದೆ. ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆಯು 28.71% ಇರುತ್ತದೆ. ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿನ ಸಂಗ್ರಹಣೆಯು 58.668 ಟಿಎಂಸಿ ಇದ್ದು, ಮೆಟ್ಟೂರಿನಿಂದ 4.905 ಟಿಎಂಸಿ ಮತ್ತು ಭವಾನಿಯಿಂದ 0.618 ಟಿಎಂಸಿ (ಒಟ್ಟು 5.542 ಟಿಎಂಸಿ) ನದಿಗೆ ಬಿಡುಗಡೆ ಮಾಡಿರುವುದಲ್ಲದೆ ತಮಿಳುನಾಡಿನ ಮೂರು ಜಲಾಶಯಗಳಲ್ಲಿ 24.705 ಟಿಎಂಸಿ ಇರುತ್ತದೆ.

### ಸಭೆಗೆ ಕೇಂದ್ರ ಸಚಿವರ ಗೈರು

ಮಹತ್ವದ ಸಭೆಗೆ ಕೇಂದ್ರ ಸಚಿವರಾದ ಹೆಚ್.ಡಿ ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಪ್ರಹ್ಲಾದ್ ಜೋಶಿ, ಸಂಸದರಾದ ತೇಜಸ್ವಿ ಸೂರ್ಯ, ಡಾ.ಸಿ.ಎನ್ ಮಂಜುನಾಥ್, ಪಿ.ಸಿ ಮೋಹನ್ ಗೈರಾಗಿದ್ದರು.

### ಡಬ್ಲ್ಯೂಎಂಎಗೆ ಮೇಲ್ಮನವಿಗೆ ನಿರ್ಧಾರ

ಸದ್ಯಕ್ಕೆ 8 ಸಾವಿರ ಕ್ಯೂಸೆಕ್ ನೀರು ಬಿಡೋಣ. ಒಂದು ವೇಳೆ ಮಳೆ ಬರದಿದ್ರೆ ಕಡಿಮೆ ಮಾಡೋಣ. ಸಿಡಬ್ಲ್ಯೂಎಂಎ ಮುಂದೆ ಅಪೀಲು ಹಾಕೋಣ ಅಂತ ಸಿಎಂ ಹೇಳಿದ್ದಾರೆ.

• ಉದಯವಾಹಿನಿ, ಬೆಂಗಳೂರು

ತಮಿಳುನಾಡಿಗೆ ಜು.12ರಿಂದ 31ರವರೆಗೆ ಪ್ರತಿ ದಿನ 1 ಟಿಎಂಸಿ ನೀರು ಹರಿಸಬೇಕು ಎಂಬ ಕಾವೇರಿ ನೀರು ನಿಯಂತ್ರಣ ಸಮಿತಿಯ (ಸಿಡಬ್ಲ್ಯುಎಂಸಿ) ಆದೇಶದ ಹಿನ್ನೆಲೆ ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಭಾನುವಾರ ಸರ್ವಪಕ್ಷ ಸಭೆ ನಡೆಯಿತು. ಸಿಎಂ ಸಿದ್ದರಾಮಯ್ಯ ಅವರು, ತಮಿಳುನಾಡಿಗೆ 8000 ಕ್ಯುಸೆಕ್ ನೀರು ಬಿಡುವುದು ಅನಿವಾರ್ಯ ಎಂದು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಜು.11ರಂದು ಕಾವೇರಿ ನೀರು ನಿಯಂತ್ರಣ ಸಮಿತಿಯ 3ನೇ ಸಭೆ ನಡೆದಿದ್ದು, ಜು.12ರಿಂದ 31ರವರೆಗೆ ಸುಮಾರು 20 ದಿನ ಪ್ರತೀ ದಿನ 1 ಟಿಎಂಸಿಯಂತೆ 20 ಟಿಎಂಸಿ ನೀರು ಬಿಡಲು ಆದೇಶಿಸಿದ್ದಾರೆ. ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ 9.4 ಟಿಎಂಸಿ, ಜುಲೈನಲ್ಲಿ 31.24 ಟಿಎಂಸಿ ನೀರು ಬಿಡಬೇಕಾಗಿದೆ. ಒಟ್ಟು 40.43 ಟಿಎಂಸಿ ಬಿಡಬೇಕಾಗಿದೆ. ಇಲ್ಲಿಯವರೆಗೂ 5 ಟಿಎಂಸಿಗೂ ಹೆಚ್ಚು ನೀರು ಬಿಡಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ. ಕಾವೇರಿ ತೀರದ ಸಚಿವರು, ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಜು.12ರಂದು ಸಭೆ ನಡೆಸಿ ನೀರು ಬಿಡದೇ ಇರಲು ಮತ್ತು ಸರ್ವಪಕ್ಷ ಸಭೆ ಕರೆಯಲು, ಸಿಡಬ್ಲ್ಯುಎಂಎ ಮುಂದೆ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದೆವು. ಈ ಹಿನ್ನೆಲೆಯಲ್ಲಿ ಇಂದು ಸರ್ವಪಕ್ಷ ಸಭೆ ನಡೆಸಲಾಯಿತು. ಬಿಜೆಪಿ, ಜೆಡಿಎಸ್, ರೈತ ಸಂಘದವರು, ಕಾನೂನು ತಂಡದ ಮುಖ್ಯಸ್ಥರಾದ ಮೋಹನ್ ಕಾತರಕಿ ಅವರು ಸೇರಿ ಹಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದ್ದಾರೆ. ನಮ್ಮ ಕಾವೇರಿ ತೀರದ ಜಲಾಶಯಗಳಲ್ಲಿ ಶೇ.63 ಮಾತ್ರ ನೀರು ಭರ್ತಿ ಆಗಿದೆ. ಕಬಿನಿ ಜಲಾಶಯ ಭರ್ತಿಯಾಗಿದ್ದು, ಕಳೆದ ಎರಡು ದಿನ 20 ಸಾವಿರ, 19 ಸಾವಿರ ಹಾಗೂ ಇಂದು 13 ಸಾವಿರ ಕ್ಯುಸೆಕ್ ನೀರು ಹರಿದು ಹೋಗಿದೆ. ಜಲಾಶಯದ ಸುರಕ್ಷತೆಗಾಗಿ ಶೇಖರಿಸಿಡಲು ಸಾಧ್ಯವಾಗದ ನೀರು ಮಾತ್ರ ಹರಿದುಹೋಗಿದೆ. ವಕೀಲರ ತಂಡದ ಸಲಹೆ ಪ್ರಕಾರ ಹೆಚ್ಚು ಮಳೆ ಬಿದ್ದರೆ ಮಾತ್ರ ಮಳೆ ಪ್ರಮಾಣಕ್ಕೆ ತಕ್ಕಂತೆ, ಸಿಡಬ್ಲ್ಯುಎಂಸಿ ಆದೇಶದ ಪ್ರಕಾರ ಪೂರ್ತಿ ನೀರು ಹರಿಸಬಹುದು. ಇಲ್ಲದಿದ್ದರೆ ಕೇವಲ 8 ಸಾವಿರ ಕ್ಯುಸೆಕ್ ನೀರು ಬಿಡಬೇಕಾಗುತ್ತದೆ. ಇದರ ಜೊತೆಗೆ ಮೇಲ್ಮನವಿ ಹಾಕೋಣ. ನಾವು ಮೊಂಡಾಟ ಆಡ್ತೀವಿ ಎಂದು ಸಿಡಬ್ಲ್ಯುಎಂಸಿಗೆ ಅನ್ನಿಸಬಾರದು ಎನ್ನುವ ಸಲಹೆ ಬಂದಿದೆ ಎಂದು ತಿಳಿಸಿದರು.

ಸರ್ವಪಕ್ಷ ಸಭೆಯಲ್ಲಿ ಡಿಸಿಎಂ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಮಾಜಿ ಸಿಎಂ ಸದಾನಂದಗೌಡ, ಎಂಎಲ್‌ಸಿ ರವಿ ಕುಮಾರ್, ಸುರೇಶ್ ಬಾಬು, ನಾಗರಾಜ್ ಯಾದವ್, ಎಜಿ ಶಶಿಕಿರಣ್ ಶೆಟ್ಟಿ, ಮಂಜೇಗೌಡ, ಜಿಟಿ ದೇವೇಗೌಡ, ಸಿಟಿ ರವಿ, ಛಲವಾದಿ ನಾರಾಯಣಸ್ವಾಮಿ, ಯದವೀರ್ ಒಡೆಯರ್, ದರ್ಶನ ಪುಟ್ಟಣ್ಣಯ್ಯ, ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಜಲ ಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ, ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ನಸೀರ್ ಅಹಮದ್, ನೀರಾವರಿ ಹಾಗೂ ಕಾನೂನು ತಜ್ಞರು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.



### ಸಿಎಂ ನೇತೃತ್ವದಲ್ಲಿ ಸರ್ವ ಪಕ್ಷಗಳ ಸಭೆ

ಕಾವೇರಿ ನದಿ ನೀರು ಹಂಚಿಕೆ ಕುರಿತಂತೆ ವಿಧಾನಸೌಧದಲ್ಲಿಂದು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ವ ಪಕ್ಷಗಳ ಸಭೆ ನಡೆಯಿತು. ಸಭೆಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್, ಸಚಿವರಾದ ಪರಮೇಶ್ವರ್, ಕೆಎಚ್ ಮುನಿಯಪ್ಪ, ಎನ್. ಚಲುವರಾಯಸ್ವಾಮಿ, ಕೆಜೆ ಜಾರ್ಜ್, ದಿನೇಶ್ ಗುಂಡೂರಾವ್, ಎಚ್‌ಸಿ ಮಹದೇವಪ್ಪ, ಕೃಷ್ಣ ಬೈರೇಗೌಡ, ವೆಂಕಟೇಶ್, ಬೋಸರಾಜ್, ಟಿಬಿ ಜಯಚಂದ್ರ, ವಿಪಕ್ಷ ನಾಯಕ ಆರ್ ಅಶೋಕ್, ಮಾಜಿ ಸಿಎಂ ಡಿವಿ ಸದಾನಂದಗೌಡ, ಜಿಟಿ ದೇವೇಗೌಡ, ಮಂಜು, ಯದುವೀರ ಒಡೆಯರ್, ಟಿಎ ಶರವಣ, ಸಿಟಿ ರವಿ, ಬಿ.ವೈ. ವಿಜಯೇಂದ್ರ, ಪಿ.ಸಿ. ಮೋಹನ್, ಅಡ್ವೋಕೇಟ್ ಜನರಲ್ ಶಶಿಕುಮಾರ್, ಹಿರಿಯ ವಕೀಲ ಮೋಹನ್ ಕಾತರಕಿ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.



## ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಾವಾಗ ಬೀಳುತ್ತೋ ಗೊತ್ತಿಲ್ಲ

• ಉದಯವಾಹಿನಿ, ಶಿವಮೊಗ್ಗ

ಮುಖ್ಯಮಂತ್ರಿಗಳಿಗೆ ನೀಡಿದ್ದ ಆನೆ ಪತ್ರಗಳು ಕಸದ ಬುಟ್ಟಿಗೆ ಸೇರಿಕೊಂಡಿವೆ. ರಾಜ ಕಾಂಗ್ರೆಸ್ ಸರ್ಕಾರ ಯಾವಾಗ ಬೀಳುತ್ತದೆ ಗೊತ್ತಿಲ್ಲ ಎಂದು ಶಿವಮೊಗ್ಗದಲ್ಲಿ ಬಿಜೆಪಿ ಸಂಸದ ಬಿ ವೈ ರಾಘವೇಂದ್ರ ಸ್ಫೋಟಕವಾದ ಭವಿಷ್ಯ ನುಡಿದಿದ್ದಾರೆ. ಶಿವಮೊಗ್ಗದ ಬಂಟರ ಭವನದಲ್ಲಿ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಯಾವಾಗ ಬೀಳುತ್ತೋ ಗೊತ್ತಿಲ್ಲ. ಈ ಸರ್ಕಾರ ಐದು ವರ್ಷ ಪೂರ್ಣಗೊಳಿಸುವುದು ಅನುಮಾನ ಇದೆ. ಕಾಂಗ್ರೆಸ್ ಸರ್ಕಾರ ಸೇಡಿನ ರಾಜಕಾರಣ ಮಾಡುತ್ತಿದೆ. ಜಿಲ್ಲೆಯ ಅಭಿವೃದ್ಧಿಗೆ ಒಂದು ರೂಪಾಯಿ ಸಹ ಸರ್ಕಾರ ಇದುವರೆಗೂ ನೀಡಿಲ್ಲ. ಕಾಂಗ್ರೆಸ್ ನಾಯಕರಿಗೆ ಅಧಿಕಾರದ ಮದ ಬಂದಿದೆ ಎಂದು ವಾಗ್ದಾಳಿ ನಡೆಸಿದರು. ಚಾಮರಾಜನಗರದಲ್ಲಿ ಮನವಿ ಪತ್ರಗಳನ್ನ ಕಸದ ಬುಟ್ಟಿಗೆ ಹಾಕಿದ್ದಾರೆ. ಮುಖ್ಯಮಂತ್ರಿ ಗೆ ನೀಡಿದ ಮನವಿ ಪತ್ರಗಳು ಕಸದ ಬುಟ್ಟಿಗೆ ಸೇರಿಕೊಂಡಿವೆ.ಕಾಂಗ್ರೆಸ್ ನಾಯಕರಿಗೆ ಜನರ ಬಗ್ಗೆ ಕಾಳಜಿ ಇಲ್ಲ ಸಹಕಾರಿ ಕ್ಷೇತ್ರದ ಸಂಘಟನೆಗೆ ಕಾರ್ಯಕರ್ತರು ಆದ್ಯತೆ ಕೊಡಬೇಕು. ಡಿಸಿಸಿ ಬ್ಯಾಂಕುಗಳನ್ನು ಬೇರೆ ಪಕ್ಷದವರು ಅಧಿಕಾರ ಹಿಡಿದಿದ್ದಾರೆ ಎಂದು ಬಿ ವೈ ರಾಘವೇಂದ್ರ ಹೇಳಿಕೆ ನೀಡಿದರು.

## 15 ರಿಂದ 20 ಸಾವಿರ ಶಾಲೆಗಳಲ್ಲಿ 'ಸರ್ಕಾರಿ ಮಾಂಟೆಸ್ಸರಿ' ಆರಂಭ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಮಕ್ಕಳ ಪೋಷಕರಿಗೆ ಗುಡ್ ನ್ಯೂಸ್ ಎನ್ನುವಂತೆ ಮೊದಲ ಹಂತದಲ್ಲಿ 15 ರಿಂದ 20 ಸಾವಿರ ಶಾಲೆಗಳಲ್ಲಿ ಸರ್ಕಾರಿ ಮಾಂಟೆಸ್ಸರಿ ಶಾಲೆಗಳನ್ನು ಆರಂಭಿಸಲಾಗುತ್ತಿದೆ ಅಂತ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಇಂದು ಬೆಂಗಳೂರಿನ ಮಡಿವಾಳದ ಸ್ತ್ರೀ ಶಕ್ತಿ ಭವನದಲ್ಲಿ ನಡೆದ ಅಂಗನವಾಡಿ ಕೇಂದ್ರಗಳಲ್ಲೇ ಪೂರ್ವ ಪ್ರಾಥಮಿಕ ಶಿಕ್ಷಣ ಜಾರಿಯಾಗಲಿ, ಐಸಿಡಿಎಸ್ ಉಳಿಸಿ ಮಕ್ಕಳನ್ನು ರಕ್ಷಿಸಿ, ಸಂಘಟನೆ–ಸಂಘರ್ಷ–ಶಿಕ್ಷಣ ಅಧ್ಯಯನ ಶಿಬಿರದದಲ್ಲಿ ಮಾತನಾಡಿದರು. ಗವರ್ನಮೆಂಟ್ ಮಾಂಟೆಸ್ಸರಿ ಆರಂಭ ಮೊದಲ ಹಂತದಲ್ಲಿ 15 ರಿಂದ 20 ಸಾವಿರ ಶಾಲೆಗಳಲ್ಲಿ ಗವರ್ನಮೆಂಟ್ ಮಾಂಟೆಸ್ಸರಿ ಆರಂಭಿಸಲಾಗುತ್ತಿದೆ. ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಣ ಮಾಡುವುದೇ ಇಲಾಖೆಯ ಉದ್ದೇಶ. ಈಗಾಗಲೇ ಇಲಾಖೆ ವತಿಯಿಂದ ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಗುಣಮಟ್ಟದ ಆಹಾರ, ಶಿಕ್ಷಕಿಯರಿಗೆ ಸೀರೆ ನೀಡಲಾಗಿದೆ. ಯಾವುದೇ ಕಾರಣಕ್ಕೂ ಅಂಗನವಾಡಿ ಶಿಕ್ಷಕಿಯರನ್ನು ತೆಗೆಯುವ ಪ್ರಶ್ನೆಯೇ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

## ಇಡಿ ಬಂಧನ ಭೀತಿ: ಎಸ್ಕೇಪ್ ಆದ ವಾಲ್ಮೀಕಿ ನಿಗಮದ ಅಧ್ಯಕ್ಷ

• ಉದಯವಾಹಿನಿ, ರಾಯಚೂರು

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ನಿಗಮದ ಅಧ್ಯಕ್ಷ, ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಗೆ ಇಡಿ ಬಂಧನ ಭೀತಿ ಶುರುವಾಗಿದೆ. ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈಗಾಗಲೇ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಇಡಿ ಅಧಿಕಾರಿಗಳು ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ನಿಗಮದ ಅಧ್ಯಕ್ಷ, ಶಾಸಕ ದದ್ದಲ್ ನಿವಾಸದ ಮೇಲೂ ಇಡಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಇದೀಗ ದದ್ದಲ್ ಗೂ ಇಡಿ ಬಂಧನ ಭೀತಿ ಶುರುವಾಗಿದೆ. ಬಂಧನ ಭೀತಿಯಲ್ಲಿರುವ ದದ್ದಲ್, ಕಳೆದ ಎರಡು ಮೂರು ದಿನಗಳಿಂದ ಯಾರ ಸಂಪರ್ಕಕ್ಕೂ ಸಿಗದೇ ಅಜ್ಞಾತ ಸ್ಥಳದಲ್ಲಿ ಇದ್ದಾರೆ ಎನ್ನಲಾಗಿತ್ತು. ಆದರೆ ಇಂದು ಬೆಳಿಗ್ಗೆ ರಾಯಚೂರಿನಲ್ಲಿ ಪ್ರತ್ಯಕ್ಷವಾಗಿರುವ ದದ್ದಲ್, ಮಾಧ್ಯಮಗಳ ಕ್ಯಾಮರಾ ಕಾಣುತ್ತಿದ್ದಂತೆ ಕಾರಿನಲ್ಲಿ ಪರಾರಿಯಾಗಿದ್ದಾರೆ.

## ಕೆಲವೇ ದಿನಗಳಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಪತನ: ಹೊಸ ಬಾಂಬ್

• ಉದಯವಾಹಿನಿ, ಮಂಡ್ಯ


ಕೆಲವೇ ದಿನಗಳಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಮಾಜಿ ಶಾಸಕ ಕೆ.ಸಿ. ನಾರಾಯಣಗೌಡ ಹೊಸ ಬಾಂಬ್ ಸಿಡಿಸಿದ್ದಾರೆ. ಕುಮಾರಣ್ಣ ಮಂಡ್ಯ ಜಿಲ್ಲೆಗೆ ದೊಡ್ಡ ಶಕ್ತಿಯಾಗಿದ್ದಾರೆ. ಕಾಂಗ್ರೆಸ್ ಸರ್ಕಾರ ತೆಗೆಯುವ ಕೆಲಸ ಶೀಘ್ರವೇ ನಡೆಯಲಿದೆ. ಬಿಜೆಪಿ ಹಾಗೂ ಜೆಡಿಎಸ್ ಸೇರಿ ಕಾಂಗ್ರೆಸ್ ಸರ್ಕಾರ ತೆಗೆಯುತ್ತೇವೆ ಎಂದು ಹೇಳಿದ್ದಾರೆ. ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ ನಾರಾಯಣ ಗೌಡ, ಸಿದ್ದರಾಮಯ್ಯ ನಾನು ಸತ್ಯ ಹರಿಶ್ಚಂದ್ರ ಎಂದು ಹೇಳಿಕೊಳ್ಳುತ್ತಾರೆ. 15 ಸೈಟುಗಳು ಯಾರದ್ದು ಸ್ವಾಮಿ ಎಂದು ಪ್ರಶ್ನೆ ಮಾಡಿದ್ದಾರೆ. ಸಿದ್ದರಾಮಯ್ಯನವರೇ ನಿಮ್ಮ ಸರ್ಕಾರದ ಹಗರಣಗಳು ಬಹಳಷ್ಟು ಇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನೂರಾರು ಕೋಟಿ ಲೂಟಿ ಮಾಡಿದ್ರಲ್ಲ, ಹಣ ಲೂಟಿ ಮಾಡುವಾಗ ನೀವು ಕಣ್ಮುಚ್ಚಿ ಕುಳಿತಿದ್ರಾ ಸ್ವಾಮಿ? ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ನಾಚಿಕೆಯಾಗಬೇಕು ಎಂದು ವಾಗ್ದಾಳಿ ನಡೆಸಿದ್ದಾರೆ.

## ಟಿಕೆಟ್ ದರ ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಇಲ್ಲ

• ಉದಯವಾಹಿನಿ, ಬೆಂಗಳೂರು

ಗ್ಯಾರಂಟಿ ಯೋಜನೆ ಜಾರಿಗೆ ಬಂದ ನಂತ್ರ, ರಾಜ್ಯ ಬೊಕ್ಕಸ ಖಾಲಿಯಾಗಿದೆ. ಕೆ ಎಸ್ ಆರ್ ಟಿಸಿಗೆ ಶಕ್ತಿ ಯೋಜನೆಯಡಿ ಉಚಿತ ಪ್ರಯಾಣಕ್ಕೆ ನೀಡಿದಂತ ಟಿಕೆಟ್ ದರವನ್ನು ಸರ್ಕಾರ ಈವರೆಗೆ ಪಾವತಿಸಿಲ್ಲ. ಈ ಎಲ್ಲಾ ಕಾರಣಗಳಿಂದ ಕೆ ಎಸ್ ಆರ್ ಟಿಸಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಲಾಗುತ್ತಿದೆ. ಇದಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕೂಡ ಸಲ್ಲಿಕೆಯಾಗಿದೆ ಎನ್ನಲಾಗಿತ್ತು. ಆದ್ರೇ ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳ ಮಾಡಲಾಗುತ್ತಿಲ್ಲ ಅಂತ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದಂತ ಅವರು ರಾಜ್ಯದಲ್ಲಿ ಕೆ ಎಸ್ ಆರ್ ಟಿ ಸಹಿತ ನಾಲ್ಕು ನಿಗಮಗಳಿಂದ ಬಸ್ ಟಿಕೆಟ್ ದರ ಹೆಚ್ಚಳ ಮಾಡುವ ಸಂಬಂಧ ರಾಜ್ಯ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ ಎಂದರು.



ಕೆ ಎಸ್ ಆರ್ ಟಿಸಿ ಅಧ್ಯಕ್ಷ ಎಸ್ ಆರ್ ಶ್ರೀನಿವಾಸ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದಂತ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ಶ್ರೀನಿವಾಸ್ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಹೆಚ್ಚಳ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗುವುದು ಅಂತ ಹೇಳಿದ್ದಾರೆ. ಆದ್ರೇ ರಾಜ್ಯ ಸರ್ಕಾರಕ್ಕೆ ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳದ ಬಗ್ಗೆ ಯಾವುದೇ ಪ್ರಸ್ತಾವನೆ ಸಲ್ಲಿಕೆ ಮಾಡಿಲ್ಲ ಅಂತ ತಿಳಿಸಿದರು.

ರಾಜ್ಯ ಸರ್ಕಾರಕ್ಕೆ ಸಾರಿಗೆ ನಿಗಮಗಳಿಂದ ಬಸ್ ಟಿಕೆಟ್ ದರ ಹೆಚ್ಚಳ ಸಂಬಂಧ ಇನ್ನೂ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ. ಅಲ್ಲದೇ ಟಿಕೆಟ್ ದರ ಏರಿಸುವಂತ ಚಿಂತನೆಯನ್ನು ರಾಜ್ಯ ಸರ್ಕಾರ ನಡೆಸಿಲ್ಲ ಅಂತ ಸ್ಪಷ್ಟಪಡಿಸಿದರು.

## ಗಿನ್ನಿಸ್ ದಾಖಲೆಗೆ ಸಾಕಾಗುವಷ್ಟು ಸುಳ್ಳು ಹೇಳಿದ್ದಾರೆ

• ಉದಯವಾಹಿನಿ, ಬೆಂಗಳೂರು



ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ಇದೀಗ ಗಿನ್ನಿಸ್ ದಾಖಲೆಗೆ ಸಾಗಾವುಷ್ಟು ಸುಳ್ಳು ಹೇಳಿದ್ದಾರೆ. ಮಂತ್ರಿಸ್ಥಾನಕ್ಕೆ ಗೌರವ ಕೊಟ್ಟು 10% ಸುಳ್ಳು ಹೇಳುವುದು ಕಡಿಮೆ ಮಾಡಿ ಎಂದು ಕಾಂಗ್ರೆಸ್ ವಕ್ತಾರ ಎಂ.ಲಕ್ಷಣ, ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಮುಡಾ ಹಗರಣದ ಆರೋಪ ಮಾಡಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನೀಲ ನಕ್ಷೆ ತೋರಿಸಿದರು. ನನ್ನ ಬಳಿಯೂ ನೀಲ ನಕ್ಷೆಯಿದೆ. ಕುಮಾರಸ್ವಾಮಿ ಅವರು ನನಗೆ 10 ನಿಮಿಷ ಟೈಮ್ ಕೊಡಲಿ. ದಾಖಲೆ ಹಿಡಿದು, ಮಾಧ್ಯಮಗಳ ಜೊತೆಗೆ ಬರುತ್ತೇನೆ ಎಂದು ಸವಾಲು ಹಾಕಿದರು.

ಕುಮಾರಸ್ವಾಮಿ ಗೆ ಟ್ಯೂಷನ್ ಕೊಟ್ಟ ಮೇಷ್ಟ್ರು ಸರಿಯಲ್ಲ. ವ್ಯಕ್ತಿಗಳ ಹೆಸರಲ್ಲಿ ಡಿನೋಟಿಫಿಕೇಷನ್ ಆಗಲ್ಲ, ಸರ್ವೆ ನಂಬರ್ ಆಧರಿಸಿ ನೋಟಿಫಿಕೇಷನ್ ಡಿನೋಟಿಫಿಕೇಷನ್ ಆಗುತ್ತದೆ. ಯಾರೋ ಟೈಪ್ ಮಾಡಿದ್ದನ್ನು ತಂದು ಬಿಡುಗಡೆ ಮಾಡಬೇಡಿ ಸ್ವಾಮೀ ಸಿಎಂ ಪತ್ನಿ ಪಾರ್ವತಿಯ ಅವರ ಬಗ್ಗೆ ದಾಖಲೆ ಇಟ್ಟು ಆರೋಪ ಮಾಡಲಿ. ಸುಮ್ಮನೆ ನೀವೇ ಸುಳ್ಳು ಸೃಷ್ಟಿ ಮಾಡಿಕೊಳ್ಳುತ್ತೀದ್ದೀರಾ ಎಂದು ವಾಗ್ದಾಳಿ ನಡೆಸಿದರು.

2005 ರಲ್ಲಿ ಜಮೀನು ಕನ್ವರ್ಷನ್ ಆಗುತ್ತದೆ. ಮುಡಾ ವಿರುದ್ಧ ಕ್ರಿಮಿನಲ್ ಕೇಸ್ ಹಾಕಬೇಕಿತ್ತು. ಮುಡಾ ಜಮೀನು ವಿಚಾರದಲ್ಲಿ ತಪ್ಪು ಮಾಡಿದೆ. ಮುಡಾ ನಡವಳಿಯಲ್ಲೇ ತಪ್ಪಾಗಿದೆ ಎಂಬುದು ಗೊತ್ತಾಗುತ್ತದೆ. ಮುಡಾ ಸ್ಕ್ಯಾಮ್ ಅಲ್ಲ, ಇದು ಸ್ಕ್ಯಾಮ್ ಅಂತ ದಯವಿಟ್ಟು ಹೇಳಬೇಡಿ. ಜಮೀನು ಪಾರ್ವತಿ ಸಿದ್ದರಾಮಯ್ಯ ಗೆ ಬಂದಿದ್ದೇ 2010 ರ ಬಳಿಕ. ಈ 3.16 ಎಕರೆ ಡೀನೋಟಿಫೈ ಆಗಿದ್ದು 1998 ರಲ್ಲಿ ಆಗ ಜಮೀನಿನ ಮಾಲಿಕತ್ವ ಇದ್ದಿದ್ದು ನಿಂಗ ಹೆಸರಲ್ಲಿ ಎಂದು ವಿವರಿಸಿದರು.

## ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕಾವೇರಿ ವಿಚಾರದಲ್ಲಿ ಹಿನ್ನಡೆ

### ಕಾವೇರಿ ವಿಚಾರದಲ್ಲಿ ನಮಗೆ ವಿರುದ್ಧ ತೀರ್ಪುಗಳು ಬರುತ್ತಿವೆ. ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಬಿಡುಗಡೆ

• ಉದಯವಾಹಿನಿ, ಉಡುಪಿ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ನಂತರ ಕಾವೇರಿ ವಿಚಾರದಲ್ಲಿ ನಮಗೆ ವಿರುದ್ಧವಾದ ತೀರ್ಪುಗಳು ಬರುತ್ತಿವೆ. ಸರ್ಕಾರವು ಕದ್ದು ಮುಚ್ಚಿ ತಮಿಳುನಾಡಿಗೆ ನಿರಂತರ ನೀರನ್ನು ಬಿಡುಗಡೆ ಮಾಡುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.



ನಿರಂತರ ನೀರು ಬಿಡುಗಡೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೈತ ಸಂಘದವರು ನನ್ನನ್ನು ಮತ್ತು ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿಯಾಗಿದ್ದಾರೆ. ರೈತರು ನೂರಾರು ದಿನಗಳಿಂದ ಧರಣಿ ನಡೆಸಿದರೂ ಸಿದ್ದರಾಮಯ್ಯನವರು ಸೌಜನ್ಯಕ್ಕೂ ಅವರನ್ನು ಮಾತನಾಡಿಸಿಲ್ಲ' ಎಂದರು.ರಾಜ್ಯದ ಪರವಾಗಿ ಸರಿಯಾಗಿ ವಾದ ಮಂಡಿಸದ ಕಾರಣ ನಮಗೆ ಹಿನ್ನಡೆಯಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕಾವೇರಿಗೂ ಉಳಿಗಾಲವಿಲ್ಲ, ಮಹದಾಯಿಗೂ ಉಳಿಗಾಲವಿಲ್ಲ ಎಂದು ಹೇಳಿದರು.

ರಾಜ್ಯ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ದಲಿತರ ಹಣವನ್ನು ಲೂಟಿ ಮಾಡಲಾಗಿದೆ. ಇತಿಹಾಸದಲ್ಲೇ ದಲಿತರ ಹಣವನ್ನು ಈ ಪ್ರಮಾಣದಲ್ಲಿ ನುಂಗಿರುವ ಸರ್ಕಾರ ಮತ್ತೊಂದಿಲ್ಲ ಎಂದರು.

ಮುಡಾ ಹಗರಣ ಇಡೀ ದೇಶವನ್ನೇ ಬೆಚ್ಚಿಬೀಳಿಸಿದೆ. 86 ಸಾವಿರ ಜನರು ಮುಡಾಕ್ಕೆ ಅರ್ಜಿ ಹಾಕಿ ನಿವೇಶನ ಸಿಗದೇ ಕಾಯುತ್ತಿದ್ದಾರೆ. ಆದರೆ ಸಿದ್ದರಾಮಯ್ಯನವರಿಗೆ ಏಕಾಏಕಿ ನಿವೇಶನಗಳನ್ನು ಕೊಟ್ಟಿದ್ದಾರೆ ಎಂದು ಆರೋಪಿಸಿದರು.

ವಿಧಾನಸಭೆ ಅಧಿವೇಶನದಲ್ಲಿ ರಾಜ್ಯ ಸರ್ಕಾರಕ್ಕೆ ಬಿಸಿ ಮುಟ್ಟಿಸಲಾಗುವುದು. ಇಂತಹ ಭ್ರಷ್ಟ ಸರ್ಕಾರಕ್ಕೆ ಜನರೇ ಉತ್ತರ ಕೊಡಬೇಕು ಎಂದರು.

### ಸರಣಿ ಭ್ರಷ್ಟಾಚಾರದ ಸರದಾರ ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಸರಣಿ ಭ್ರಷ್ಟಾಚಾರಗಳು ನಡೆದಿವೆ. ಒಂದರಂತೆ ಒಂದು ಹೊರಬರುತ್ತಿವೆ. ರಾಜ್ಯದ ಜನತೆಯ ಹಣವನ್ನು ಸರ್ಕಾರ ಕೊಳ್ಳೆ ಹೊಡೆಯುತ್ತಿದೆ ಎಂದು ಆರೋಪ ಎಸಗಿರುವ ವಿಪಕ್ಷ ನಾಯಕ ಆರ್. ಅಶೋಕ, ಸರಣಿ ಭ್ರಷ್ಟಾಚಾರದ ಸರದಾರ ಸಿದ್ದರಾಮಯ್ಯ ಎಂದು ವ್ಯಂಗ್ಯವಾಡಿದ್ದಾರೆ. 'ಸರಣಿ ಭ್ರಷ್ಟಾಚಾರದ ಸರದಾರ ಸಿಎಂ ಸಿದ್ದರಾಮಯ್ಯನವರ ಕರ್ಮಕಾಂಡ ಅಗೆದಷ್ಟು ಆಳವಾಗಿದೆ, ಬಗೆದಷ್ಟು ಹೊರಬರುತ್ತಿದೆ. ಸಹಕಾರ ಇಲಾಖೆಯ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಬಹುಕೋಟಿ ರೂಪಾಯಿ ಮೊತ್ತದ ಬೃಹತ್ ಹಗರಣ ಬೆಳಕಿಗೆ ಬಂದಿದ್ದು, ಹಗರಣದ ತನಿಖೆ ನಡೆಸುವಂತೆ ಮಾನ್ಯ ಹೈಕೋರ್ಟ್ ತಾಕೀತು ಮಾಡಿದೆ' ಎಂದರು.

## ಅಧಿಕ ದರ ವಸೂಲಿ ಮೇಲೆ ನಿಗಾ ಇಡಿ

• ಉದಯವಾಹಿನಿ, ಮಂಗಳೂರು

'ಡೆಂಗಿ ಚಿಕಿತ್ಸೆಗೆ ದಾಖಲಾಗುವ ರೋಗಿಗಳಿಗೆ ನೀಡುವ ರಕ್ತದ ಪ್ಲೇಟ್‌ಲೆಟ್‌ಗಳಿಗೆ ಆಸ್ಪತ್ರೆಗಳು ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಜಾಸ್ತಿ ದರ ವಸೂಲಿ ಮಾಡುತ್ತಿರುವ ದೂರುಗಳಿವೆ. ಇದಕ್ಕೆ ಅವಕಾಶ ನೀಡಬಾರದು. ಈ ಬಗ್ಗೆ ನಿಗಾ ಇಡಬೇಕು' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಡೆಂಗಿ ನಿಯಂತ್ರಣ ಕ್ರಮಗಳ ಬಗ್ಗೆ ಜಿಲ್ಲಾಡಳಿತದ ಅಧಿಕಾರಿಗಳ ಜೊತೆ ಅವರು ಸಭೆ ನಡೆಸಿದರು. ಡೆಂಗಿ ಚಿಕಿತ್ಸೆಗೆ ರೋಗಿಗಳು ಸಮಸ್ಯೆ ಎದುರಿಸುವ ಸ್ಥಿತಿ ತಲೆದೋರಬಾರದು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಾಸಿಗೆ, ರಕ್ತ ಪೂರೈಕೆಗೆ ವ್ಯವಸ್ಥೆ ಕಲ್ಪಿಸಬೇಕು ಎಂದರು.' ಆಯಾ ತಾಲ್ಲೂಕಿನ ಆರೋಗ್ಯಾಧಿಕಾರಿಗಳು ಡೆಂಗಿ ನಿಯಂತ್ರಣದ ಸಂಪೂರ್ಣ ಜವಾಬ್ದಾರಿ ವಹಿಸಬೇಕು.



ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗಾಲಯ ತಂತ್ರಜ್ಞರ ಕೊರತೆ ಇದ್ದರೆ ಅವರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಬೇಕು. ಸೊಳ್ಳೆಗಳ ಸಂತಾನೋತ್ಪತ್ತಿ ನಿಯಂತ್ರಣಕ್ಕೆ ಪ್ರತಿದಿನವೂ ಗ್ರಾಮ ಮತ್ತು ಪಟ್ಟಣಗಳಲ್ಲಿ ಫಾಗಿಂಗ್ ಮಾಡಬೇಕು' ಎಂದು ನಿರ್ದೇಶನ ನೀಡಿದರು.

'ನಿರ್ಮಾಣ ಹಂತದ ಕಟ್ಟಡಗಳನ್ನು ಕಾರ್ಮಿಕ ಇಲಾಖೆ ಅಧಿಕಾರಿಗಳು ನಿರಂತರವಾಗಿ ಪರಿಶೀಲಿಸಬೇಕು. ಇದಕ್ಕಾಗಿ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಕಾರ್ಮಿಕರಿಗೆ ಸೊಳ್ಳೆ ಪರದೆ ಒದಗಿಸಬೇಕು. ಪಾಲಿಕೆಯು ವಿವಿಧೋದ್ದೇಶದ ಕಾರ್ಯಕರ್ತರನ್ನು ಸದ್ಯಕ್ಕೆ ಡೆಂಗಿ ನಿರ್ವಹಣೆಗೆ ಮಾತ್ರ ಬಳಸಬೇಕು' ಎಂದು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಎಂ.ಪಿ., ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಆನಂದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಡಿಸಿಪಿ (ಅಪರಾಧ ಮತ್ತು ಸಂಚಾರ) ದಿನೇಶ್ ಕುಮಾರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ನವೀನಚಂದ್ರ ಭಾಗವಹಿಸಿದ್ದರು.

**ಈ ದಿನದ ದರ** ಪೆಟ್ರೋಲ್: 103.44 ₹/L ಡೀಸೆಲ್ : 89.97 ₹/L ಬಂಗಾರ: ₹7,376/Gram24ct ₹6,760/Gram22ct ಬೆಳ್ಳಿ: ₹95.50/Gram

# ಕಾನೂನು ಚೌಕಟ್ಟಿನಲ್ಲಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಿ

## ಅಧಿಕಾರಿಗಳು ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಕಚೇರಿಗಳಿಗೆ ಅಲೆಸದೆ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ

• **ಉದಯವಾಹಿನಿ, ಮಾಲೂರು**


ಉದಯವಾಹಿನಿ ಚಿತ್ರ

**ಸಾರ್ವಜನಿಕರ ಅಹವಾಲು ಸ್ವೀಕಾರ**

ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಕಚೇರಿಗಳಿಗೆ ಅಲಿಸದೆ ಮಧ್ಯ ವರ್ತಿಗಳ ಹಾವಳಿಗೆ ಕಡಿವಾಣ ಹಾಕಿ ಭ್ರಷ್ಟಚಾರ ರಹಿತವಾಗಿ ಫಲಾನುಭವಿಗಳು ನೇರವಾಗಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಕಾನೂನು ಚೌಕಟ್ಟಿನಲ್ಲಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವಂತೆ ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ತಾಲ್ಲೂಕಿನ ಮಾಸ್ತಿ ಗ್ರಾಮದ ಟಿ.ಜಿ.ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿದರು.

ತಾಲ್ಲೂಕಿನ ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು, ನೌಕರರು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಜನಸಂಪರ್ಕ ಸಭೆಗಳಲ್ಲಿ ನೀಡುವ ಅರ್ಜಿಗಳಲ್ಲಿ ಶೇ ಕಡಾ 98 ರಷ್ಟು ಅರ್ಜಿಗಳು ವಿಲೇವಾರಿ ಮಾಡಿದ್ದಾರೆ. ಅಧಿಕಾರಿಗಳು ತಮ್ಮ ಇಲಾಖೆಗಳಿಗೆ ಬಂದ ಅರ್ಜಿಗಳು ಕಾನೂನು ಚೌಕಟ್ಟಿನಲ್ಲಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಬೇಕು, ತಾಲ್ಲೂಕಿನಲ್ಲಿ ಎರಡನೇ ಬಾರಿಗೆ ಶಾ ಸಕನಾಗಿ ಆಯ್ಕೆಯಾದ್ದು ಭ್ರಷ್ಟಾಚಾರ ರಹಿತ ಆ ಡಳಿತ ನೀಡುವುದೇ ನನ್ನ ಮೂಲ ಧ್ಯೇಯವಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಇಲಾಖೆ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು, ಬಡವರು ಸಾಮಾನ್ಯ ಜನರು ಕೆಲಸ ಕಾರ್ಯಗಳಿಗೆ ಕಚೇರಿಗಳಿಗೆ ಬಂದಾಗ ಅವರಿಗೆ ಸ್ಪಂದಿಸಿ ಅವರ ಬಳಿ ಸೌಜನ್ಯವಾಗಿ ವರ್ತಿಸುವ ಮೂಲಕ ಕೆಲಸ ಕಾರ್ಯಗಳನ್ನು ಮಾಡಿಕೊಡಬೇಕು ಎಂದ ಅವರು, ರೈತರು ಸ್ವಾಧೀನದಲ್ಲಿರುವ ಪಿ ನಂಬರ್ ಜಮೀನುಗಳು ಸುಮಾರು ವರ್ಷಗಳಿಂದ ದುರಸ್ತಿಯಾಗುತ್ತಿಲ್ಲ, ರೆಕಾರ್ಡ್ ರೂಮುಗಳಲ್ಲಿ ದಾಖಲೆಗಳು ಸಿಗುತ್ತಿಲ್ಲ, ಜಮೀನು ಸ್ವಾಧೀನದಲ್ಲಿರುವ ರೈತರ ಜಮೀನನ್ನು ಸ್ಥಳ ಪರಿಶೀಲನೆ ನಡೆಸಿ ಅವರಿಗೆ ಪಿ ನಂಬರ್ ದುರಸ್ತಿ ಮಾಡಿಕೊಡುವ ಮೂಲಕ ಜಿಲ್ಲಾಧಿಕಾರಿಗಳು ಸರ್ಕಾರದಲ್ಲಿ ಚರ್ಚಿಸಿ ಪಿ ನಂಬರ್ ಜಮೀನಿನ ರೈತರಿಗೆ ಅನುಕೂಲ ಕಲ್ಪಿಸಬೇಕು ಎಂದರು.

> **ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಕಚೇರಿಗಳಿಗೆ ಅಲಿಯುವುದನ್ನು ತಪ್ಪಿಸಲು ದಾಖಲೆಗಳನ್ನು ಡಿಜಿಟಲಿಕರಣದ ಮೂಲಕ ನೀಡಲಾಗುತ್ತಿದೆ ಕಂದಾಯ ಇಲಾಖೆಯಲ್ಲಿ ಜಮೀನು ನೋಂದಣಿಯಾದ 7 ನೋಟಿಸ್ ದಿನಗಳು ಮುಗಿದ 8ನೇ ದಿನದಲ್ಲಿ ಮಾಡಿ ಕೊಡಲಾಗುತ್ತಿದೆ 15 ದಿನಗಳ ನೋಟಿಸ್ ನೀಡಿದ 16 ದಿನದಲ್ಲಿಯೇ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಖಾತೆ ಆಗುತ್ತಿದೆ, ಜಿಲ್ಲಾ ನ್ಯಾಯಾಲಯದಲ್ಲಿ ಅಧಿಕಾರವಹಿಸಿಕೊಂಡಾಗ 5 ವರ್ಷಗಳಿಂದ ಬಾಕಿ ಉಳಿದಿದ್ದ ಪ್ರಕರಣಗಳನ್ನು 3 ತಿಂಗಳಲ್ಲಿ ಇತ್ಯರ್ಥ ಪಡಿಸಲಾಗಿದೆ**
>
> **-ಅಕ್ರಂ ಪಾಷ, ಜಿಲ್ಲಾಧಿಕಾರಿ**

### 8000 ಅರ್ಜಿಗಳನ್ನು ಫಾರಂ ನಂಬರ್ 53-57 ಮೂಲಕ ಅರ್ಜಿ

**ರೈತರು ಸ್ವಾಧೀನದಲ್ಲಿರುವ ಜಮೀನಿಗೆ ಭೂ ಮಂಜೂರಾತಿಗಾಗಿ ಸುಮಾರು 8000 ಅರ್ಜಿಗಳನ್ನು ಫಾರಂ ನಂಬರ್ 53-57 ಮೂಲಕ ಅರ್ಜಿಗಳನ್ನು ಹಾಕಿದ್ದು ದರಕಾಸ್ತು ಸಮಿತಿಯಲ್ಲಿ ಇಟ್ಟು ಚರ್ಚಿಸಿ ಸ್ವಾಧೀನದಲ್ಲಿರುವ ರೈತರ ಕಂದಾಯ ಇಲಾಖೆಯ ಅಧಿಕಾರಿಗಳು ನಡೆದು ತೆರಳಿ ಸ್ಥಳ ಪರಿಶೀಲನೆ ನಡೆಸಿ ಹಂತ ಹಂತವಾಗಿ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು, ಜಿಲ್ಲಾಧಿಕಾರಿ ಅಕ್ರಂ ಪಾಷಾ ಜಿಲ್ಲಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಜಿಲ್ಲಾಡಳಿತ ಅಧಿಕಾರಿಗಳು ಹಾಗೂ ತಾಲ್ಲೂಕು ಆಡಳಿತದ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಅವರು ಕೈಗೊಂಡ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿವೆ ಎಂದರು.**

ಎಸಿ ನ್ಯಾಯಾಲಯದಲ್ಲಿ ಉಳಿದ ಪ್ರಕರಣಗಳನ್ನು ಸಹ ವಿಲೇವಾರಿ ಮಾಡಲಾಗುತ್ತಿದೆ, ತಹಶೀಲ್ದಾರ್ ನ್ಯಾಯಾಲಯದಲ್ಲಿ 10,000 ಪ್ರಕರಣಗಳಲ್ಲಿ 200 ಪ್ರಕರಣಗಳು ಮಾತ್ರ ಉಳಿದಿವೆ, ರೆಕಾರ್ಡ್ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ, ಆರ್‌ಟಿಸಿಯಂತೆ ಫೈಲೋಡಿಂಗ್ ವ್ಯವಸ್ಥೆ ಅನುಷ್ಠಾನಗೊಳಿಸಲಾಗಿತ್ತು.

ಪ್ರಾಯೋಗಿಕವಾಗಿ ಕೋಲಾರ ತಾಲ್ಲೂಕಿನಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತಂದಿದೆ ಹಂತವಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಫೈಲ್ ಲೋಡಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುವುದು ಇದರಿಂದ ಕಂದಾಯ ಇಲಾಖೆಯ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದಾಗಿದೆ ತ್ವರಿತವಾಗಿ ಪರಿಣಾಮಕಾರಿಯಾಗಿ ಜಿಲ್ಲಾಡಳಿತ ತಾಲ್ಲೂಕು ಆಡಳಿತ ಮನೆ ಬಾಗಿಲಿಗೆ ಸೇವೆಯನ್ನು ನೀಡುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿದರು. ಕೃಷಿ ಇಲಾಖೆಯು ಸರ್ಕಾರದ ಯೋಜನೆಗಳನ್ನು ಪ್ರಚಾರಪಡಿಸಲು ಹಮ್ಮಿಕೊಂಡಿರುವ ಕೃಷಿ ರಥ ಯಾತ್ರೆಗೆ ಶಾಸಕ ಕೆ ವೈ ನಂಜೇಗೌಡ ಹಾಗೂ ಜಿಲ್ಲಾಧಿಕಾರಿ ಅಕ್ರಂ ಪಾಷ ಚಾಲನೆ ನೀಡಿದರು. ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

---

# ಬಾಲಕರ ವಿದ್ಯಾರ್ಥಿ ನಿಲಯ ಜಂಟಿ ನಿರ್ದೇಶಕರು, ಗುತ್ತಿಗೆದಾರರಿಂದ ಕಳಪೆ ಕಾಮಗಾರಿ: ಹುಣಸನಹಳ್ಳಿ ವೆಂಕಟೇಶ್

• **ಉದಯವಾಹಿನಿ, ಬಂಗಾರಪೇಟೆ**



ಉದಯವಾಹಿನಿ ಚಿತ್ರ



ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮ ಸಂಪೂರ್ಣ ವಿಫಲವಾಯಿತು. ತಾಲ್ಲೂಕಿನ ಬೂದಿಕೋಟೆ ಹೋಬಳಿಯಲ್ಲಿ ಅಂಬೇಡ್ಕರ್ ಸರ್ಕಾರ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನೂತನ ಕಟ್ಟಡ ಉದ್ಘಾಟನೆವಾಯಿತು.

ಈ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಕರ್ನಾಟಕ ದಲಿತ ರೈತ ಸೇನೆ ರಾಜ್ಯ ಅಧ್ಯಕ್ಷರಾದ ಹುಣಸನಹಳ್ಳಿ ಎನ್ ವೆಂಕಟೇಶ್ ಮಾತನಾಡಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀನಿವಾಸ್, ಗುತ್ತಿಗೆದಾರರಿಂದ ಪೂರ್ತಿ ಕಳಪೆ ಕಾಮಗಾರಿ ಯಾಗಿದೆ ಎಂದು ಕೆಂಡಮಂಡಲಾದರೂ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅನುದಾನ, ವಿದ್ಯಾರ್ಥಿ ನಿಲಯವನ್ನು ಲ್ಯಾಂಡ್ ಆರ್ಮಿ ಯವರು ಸರಿಯಾಗಿ ಬಳಕೆ ಮಾಡಿಕೊಳ್ಳುತ್ತಿಲ್ಲ ಇದಕ್ಕೆ ತಕ್ಕ ಉದಾಹರಣೆ ಬೂದಿಕೋಟೆ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಎಂದರು.

ಈ ಸಂದರ್ಭದಲ್ಲಿ, ಜೀವಿಕ ರಾಮಚಂದ್ರ, ಹುಳದೇನಹಳ್ಳಿ ವೆಂಕಟೇಶ್, ಹಿರೇಕಾರಪ್ಪನಳ್ಳಿ ಮುನಿರಾಜು, ಕಲಾವಿದ ಯಲ್ಲಪ್ಪ ಹಾಜರಾಗಿದ್ದರು.

> **ಇದರ ಅಂದಾಜು ವೆಚ್ಚ 2 ಕೋಟಿರೂ ಅದರೂ ಗುತ್ತಿಗೆದಾರರು ಕೇವಲ ತನ್ನ ಲಾಭಕ್ಕೆ ಮಾತ್ರ ಕಾಮಗಾರಿ ಮಾಡುತ್ತಿದ್ದಾರೆ, ಹೊರತು ಗುಣಮಟ್ಟ ನೋಡುತ್ತಿಲ್ಲ ಹಿಂತಾ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದೆ ಕೊಲ್ಲುವಲ್ಲಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ , ಶ್ರೀನಿವಾಸ್, ತಾಲ್ಲೂಕು ಸಹಯಧಿಕಾರಿ ಅಂಜಲಿ, ವಿ, ರವರು ಪೂರ್ತಿ ವಿಫಲರಾಗಿದ್ದಾರೆ**
>
> **-ಹುಣಸನಹಳ್ಳಿ ಎನ್ ವೆಂಕಟೇಶ್ , ಅಧ್ಯಕ್ಷ**

---

# ನಾಗಮಂಗಲ ಬೆಣ್ಣೆಗೆ ಕರಗುವ ಮನ

• **ಉದಯವಾಹಿನಿ, ನಾಗಮಂಗಲ**

ತಾಲ್ಲೂಕು ಗುಣಮಟ್ಟದ ಬೆಣ್ಣೆ ತಯಾರಿಸುವುದಕ್ಕೆ ಖ್ಯಾತಿ ಪಡೆದಿದೆ. ಆದ್ದರಿಂದಲೇ ನಾಗಮಂಗಲ ಬೆಣ್ಣೆ ಎಂದೇ ಹೆಸರಾಗಿದೆ. ಈ ಬೆಣ್ಣೆ ರುಚಿಯ ಹಿಂದೆ ಇಲ್ಲಿನ ರೈತರಿಗೆ ಹಲವಾರು ತಲೆಮಾರಿನಿಂದ ಬಂದ ನೈಪುಣ್ಯ ಎದೆ. ಆಗಷ್ಟೇ ಕತ್ತಲು ಸರಿದು ಬೆಳಕು ಹರಿಯುತ್ತಿತ್ತು.

ನಾಲ್ಕೈದು ಮಹಿಳೆಯರು ಒಟ್ಟಾಗಿ ಬಿಂಡಿಗನವಿಲೆಯ ಬಸ್ ನಿಲ್ದಾಣ ಸಮೀಪವಿರುವ ಸಂತೆಗೆ ಬಂದರು. ಅವರ ಕೈಯಲ್ಲಿ ಬ್ಯಾಗುಗಳು ಇದ್ದವು. ಅವುಗಳಿಂದ ಬಕೆಟುಗಳನ್ನು ತೆಗೆದು ಬೆಣ್ಣೆಯನ್ನು ಮುದ್ದೆ ಕಟ್ಟಿ ಹರಿವಾಣಗಳಲ್ಲಿ ಒಪ್ಪವಾಗಿ ಜೋಡಿಸುತ್ತಿದ್ದರು. ಇವರ ಕೆಲಸ ಇನ್ನೂ ಮುಗಿದಿರಲಿಲ್ಲ, ಅಷ್ಟರಲ್ಲೇ ಇನ್ನೊಂದು ಗುಂಪು ಬಂದಿತು. ಹೀಗೆ ಅರ್ಧಗಂಟೆ ಅವಧಿಯಲ್ಲಿ ನೂರಕ್ಕೂ ಹೆಚ್ಚು ಮಹಿಳೆಯರು, ಪುರುಷರು ಹರಿವಾಣದಲ್ಲಿ ಬೆಣ್ಣೆಮುದ್ದೆಗಳನ್ನು ಇಟ್ಟು ವ್ಯಾಪಾರಕ್ಕೆ ಸಿದ್ಧವಾಗಿದ್ದರು.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು, ಕದಬಹಳ್ಳಿ ಬಿಂಡಿಗನವಿಲೆಯಲ್ಲಿ ಬೆಳ್ಳಂಬೆಳಿಗ್ಗೆ ಸಂತೆಗೆ ಭೇಟಿ ನೀಡಿದರೆ ಈ ದೃಶ್ಯ ಕಾಣಸಿಗುತ್ತದೆ.

ಗುಣಮಟ್ಟದ ಬೆಣ್ಣೆಗೆ ಹೆಸರಾಗಿರುವ ಈ ಸಂತೆಗಳಲ್ಲಿ ಕೆಲವೇ ಗಂಟೆಗಳಲ್ಲಿ ರೈತರು ತಂದ ಬೆಣ್ಣೆ ಮಾರಾಟವಾಗಿ ಖಾಲಿ ತಟ್ಟೆ ಹಿಡಿದು ಸಾಗುವುದನ್ನು ನೋಡಬಹುದು. ಎಲ್ಲಕ್ಕಿಂತ ಮಿಗಿಲಾಗಿ ಬೆಣ್ಣೆ ಮಾರಾಟ ಮಾಡುವ ಮಹಿಳೆಯರ ಮಾತಿನ ಕೌಶಲ, ಚೌಕಾಸಿ ಮಾಡುವ ಪರಿಯೋ ಅದ್ಭುತ. ಬಿಂಡಿಗನವಿಲೆ, ಕದಬಹಳ್ಳಿ, ಬೆಳ್ಳೂರು ಸಂತೆಗಳಲ್ಲಿ ಸಿಗುವ ಬೆಣ್ಣೆಯ ವಿಶೇಷ ಏನು ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ. ಹಿಂದಿನಿಂದಲೂ ಈ ಹೋಬಳಿಗಳ ಬಹುತೇಕ ರೈತರು ಜೀವನೋಪಾಯಕ್ಕಾಗಿ ಬೆಣ್ಣೆ ಮಾಡಿ ಮಾರಾಟ ಮಾಡುತ್ತಿದ್ದಾರೆ.

ಇದಕ್ಕೆ ಬೇಕಾದ ನೈಪುಣ್ಯವನ್ನು ಅಳವಡಿಸಿಕೊಂಡಿರುವುದು ಗುಣಮಟ್ಟದ ಬೆಣ್ಣೆ ಸಿಗಲು ಕಾರಣ.

---

# ವಿಶೇಷ ಚೇತನರನ್ನ ಮುಖ್ಯ ವಾಹಿನಿಗೆ ಬರಲು ಅವಕಾಶ ಕೊಡಿ

• **ಉದಯವಾಹಿನಿ, ಶಿಡ್ಲಘಟ್ಟ**


ಉದಯವಾಹಿನಿ ಚಿತ್ರ

ಪರಿಸರ ಸಮತೋಲನಕ್ಕೆ ಅರಣ್ಯಗಳ ಅವಶ್ಯಕತೆ ಇದೆ. ನಮ್ಮ ದೇಶಕ್ಕೆ ಜನಸಂಖ್ಯೆಯೇ ಆಸ್ತಿಯಾಗಿದೆ ಎಂದು ಮಾರ್ಗದರ್ಶಿ ಸಂಸ್ಥೆಯ ಮುಖ್ಯಸ್ಥೆ ಶಾಂತಲಾ ತಿಳಿಸಿರು. ತಾಲ್ಲೂಕಿನ ಜಂಗಮಕೋಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಮಾರ್ಗದರ್ಶಿ ವಿಕಲಚೇತನರ ಸ್ವಯಂಸೇವಾ ಸಂಸ್ಥೆ, ಎಸ್‌ಸಿಐ ನವಜೀವನ ಸೇವಾ ಸಂಘ, ಭಾರತ್ ಸೌಟ್ಸ್ ಮತ್ತು ಗೈಡ್ಸ್ ಘಟಕ ವತಿಯಿಂದ ವನಮಹೋತ್ಸವ, ಸ್ವಚ್ಛತಾ ಕಾರ್ಯಕ್ರಮ, ಡೆಂಘಿ ನಿಯಂತ್ರಣ ಜಾಗೃತಿ ಜಾಥಾ ಕುರಿತು ಮಾತನಾಡಿ,

ಪ್ರತಿಯೊಬ್ಬ ವ್ಯಕ್ತಿ ವರ್ಷಕ್ಕೆ ಒಂದು ಗಿಡ ನೆಟ್ಟರೆ ಕೋಟಿಗಳಷ್ಟು ಮರಗಳನ್ನು ಬೆಳೆಸಬಹುದು. ಪರಿಸರ ದಿನಾಚರಣೆ, ವನ ಮಹೋತ್ಸವ ಕಾರ್ಯಕ್ರಮಗಳು ಒಂದು ದಿನದ ಆಚರಣೆಗೆ ಸೀಮಿತ ಆಗಬಾರದು.

ಅರಣ್ಯ ಉಳಿಸಿ, ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ ಎಷ್ಟು ಮುಖ್ಯವೋ ಅದೇ ರೀತಿ ಅಂಗವಿಕಲ ವಿದ್ಯಾರ್ಥಿಗಳನ್ನ ಸಮಾಜದಲ್ಲಿ ಮುಖ್ಯ ವಾಹಿನಿಗೆ ತರಲು ಸಹಕರಿಸಬೇಕು ಎಂದರು.

ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಪ್ರಸನ್ನ ಕುಮಾರ್, ನವಜೀವನ ಸಂಸ್ಥೆಯ ಶಿಡ್ಲಘಟ್ಟ ತಾಲ್ಲೂಕು ಅಧ್ಯಕ್ಷ ಬೆಳ್ಳೂಟಿ ಮುನಿರಾಜು, ಜಂಗಮಕೋಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಸುಜಾತ ನರಸಿಂಹಯ್ಯ, ಫಯಾಜ್, ವೆಂಕಟೇಶ್, ರಾಧಾಕೃಷ್ಣ ವೈದ್ಯಾಧಿಕಾರಿ ಮಂಜುನಾಥ್, ಡಾ.ಅಂಬಿಕಾ, ಮೆಹಬೂಬ್ ಪಾಷಾ, ಸುಷ್ಮಾ, ನಾಗರತ್ನ, ಲತಾ, ಮೇಘ ಜೋಶಿ, ವೆಂಕಟಲಕ್ಷ್ಮಮ್ಮ, ಸಿ.ಬಿ. ಪ್ರಕಾಶ್, ಜಗದೀಶ್, ಹಿಮ ಮಂಜುನಾಥ್, ರವಿ ಹಾಜರಿದ್ದರು.

---

# ರಾಮನಗರಕ್ಕೆ ಬೆಂಗಳೂರು ದಕ್ಷಿಣ ಮರುನಾಮಕರಣಕ್ಕೆ ಕೆಆರ್‌ಎಸ್ ಪಕ್ಷ ವಿರೋಧ

• **ಉದಯವಾಹಿನಿ, ರಾಮನಗರ**


ಉದಯವಾಹಿನಿ ಚಿತ್ರ

ಬೆಂಗಳೂರು ನಗರಾಭಿವೃದ್ಧಿ ಸಚಿವರು ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಬದಲಾವಣೆ ಮಾಡಲು ಮುಂದಾಗಿರುವುದರ ಹಿಂದೆ ಸ್ವಹಿತಾಸಕ್ತಿ ಅಡಗಿದೆ' ಎಂದು ಕೆಆರ್ ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಲ್.ಜೀವನ್ ಆಕ್ರೋಶ ವ್ಯಕ್ತಪಡಿಸಿದರು.

ಹೆಸರು ಬದಲಾವಣೆ ಪ್ರಸ್ತಾಪವು ಮೂರ್ಖತನದ ನಡೆಯಾಗಿದೆ. ಹೆಸರನ್ನು ಬದಲಾಯಿಸುವುದರಿಂದ ಜಿಲ್ಲೆಯ ಜನರ ಭಾವನೆಗಳಿಗೆ ಧಕ್ಕೆಯಾಗುತ್ತದೆ. ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ. ಇವರು ಹೇಳುವಂತೆ ಅಭಿವೃದ್ಧಿ ಹೆಬ್ಬಾಗಿಲು ತೆರೆಯುವುದಿಲ್ಲ. ಬದಲಿಗೆ, ಕೆಲವೇ ರಿಯಲ್ ಎಸ್ಟೇಟ್ ಕುಳಗಳಿಗೆ ಅನುಕೂಲವಾಗುತ್ತದೆ' ಎಂದು ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲೆ ಹೆಸರು ಬದಲಾವಣೆಯಾದರೆ ರೈತರ ಜಮೀನಿಗೆ ಹೆಚ್ಚಿಗೆ ಬೆಲೆ ಬರುತ್ತದೆ ಎಂದು ಡಿಸಿಎಂ ಅಂದುಕೊಂಡಿದ್ದಾರೆ. ಅದು ಸುಳ್ಳು. ಬದಲಾವಣೆಯಿಂದ ಡಿಕೆಶಿ ಅವರ ವ್ಯವಹಾರ ಮತ್ತು ಉದ್ಯಮ ಬೆಳವಣಿಗೆಗೆ ಅನುಕೂಲವಾಗಲಿದೆ ಅಷ್ಟೆ. ಜಿಲ್ಲೆಯ ಅಭಿವೃದ್ಧಿ ಬಗ್ಗೆ ಕಾಳಜಿ ಇದ್ದರೆ, ತಮ್ಮ ಅಧಿಕಾರ ಬಳಸಿಕೊಂಡು ರಾಮನಗರ ಹೆಸರಿನಲ್ಲೇ ಅಭಿವೃದ್ಧಿ ಮಾಡಲಿ' ಎಂದರು.

'ಡಿಸಿಎಂ ಪ್ರಸ್ತಾಪವನ್ನು ಕೆಆರ್‌ಎಸ್ ಪಕ್ಷ ವಿರೋಧಿಸುತ್ತದೆ. ಜಿಲ್ಲೆಯ ಜನರ ಭಾವನೆಗಳಿಗೆ ಧಕ್ಕೆ ತರುವ ಇಂತಹ ಪ್ರಸ್ತಾವವನ್ನು ಮುಖ್ಯಮಂತ್ರಿ ಮತ್ತು ಸಚಿವ ಸಂಪುಟ ತಿರಸ್ಕರಿಸಬೇಕು.

ರಾಮನಗರ ಎಂಬ ಜಿಲ್ಲೆಯ ಅಸ್ಮಿತೆಯನ್ನು ಹಾಗೆಯೇ ಉಳಿಯುವಂತೆ ಮಾಡಬೇಕು. ಮರುನಾಮಕರಣದ ಹೆಸರಿನಲ್ಲಿ ಅನಗತ್ಯ ಸಮಸ್ಯೆಗಳನ್ನು ಸೃಷ್ಟಿಗೆ ಅವಕಾಶ ಮಾಡಿಕೊಡಬಾರದು' ಎಂದು ಆಗ್ರಹಿಸಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಿರಣ್ ಎಚ್., ಮಹಮ್ಮದ್ ಮುಸಾದಿಕ್ ಪಾಷಾ, ಲಿಯಾಖತ್ ಅಲಿ, ರೆಹಮತ್ ಪಾಷಾ ಹಾಗೂ ರಘುನಂದನ್ ಇದ್ದರು.

> **'ಹೆಸರು ಬದಲಾವಣೆ ಬದಲು ಜಿಲ್ಲೆಯಲ್ಲಿ ಬೇರು ಬಿಟ್ಟಿರುವ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಕ್ಕೆ ಕಡಿವಾಣ ಹಾಕಲಿ. ದಕ್ಷ, ಪಾರದರ್ಶಕ ಆಡಳಿತದೊಂದಿಗೆ ಅಗತ್ಯ ಮೂಲಸೌಕರ್ಯ ಒದಗಿಸಲಿ. ಅಗತ್ಯ ಕಚೇರಿ, ಅಧಿಕಾರಿಗಳು ಹಾಗೂ ಸಿಬ್ಬಂದಿ ನೇಮಕ ಮಾಡಲಿ. ನೀರಾವರಿ ಸೇರಿದಂತೆ ವಿವಿಧ ಯೋಜನೆಗಳಿಗೆ ಅನುದಾನ ತರಲಿ. ಆಗ ಜಿಲ್ಲೆಯು ತಾನಾಗೇ ಅಭಿವೃದ್ಧಿ ಪಥದಲ್ಲಿ ಸಾಗಲಿದೆ**
>
> **-ಎಲ್.ಜೀವನ್, ಕಾರ್ಯದರ್ಶಿ**

---

# ಎಚ್.ಡಿ. ದೇವೇಗೌಡರ ಕುಟುಂಬವನ್ನು ಮುಳುಗಿಸಲು ಹೊರಟಿದ್ದಾರೆ: ಶಾಸಕ

• **ಉದಯವಾಹಿನಿ, ಮಂಡ್ಯ**



ಮಂಡ್ಯ ಕ್ಷೇತ್ರದಿಂದ ಲೋಕಸಭೆಯಲ್ಲಿ ಸ್ಪರ್ಧಿಸಿ ಸಂಸದರಾಗಿ, ಸಚಿವರಾಗಿ ಆಯ್ಕೆಯಾದ ಬಳಿಕ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಅವರಿಗೆ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಅಭಿನಂದನ ಸಮಾರಂಭ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ಶಾಸಕ ಜಿಟಿ ದೇವೇಗೌಡ ರಾಜ್ಯದ ಅಭಿವೃದ್ಧಿಗೆ ನರೇಂದ್ರ ಮೋದಿಯವರ ಸಹಕಾರ ಬೇಕು ಆದರೆ ಕಾಂಗ್ರೆಸ್‌ಗೆ ರಾಜ್ಯದ ಅಭಿವೃದ್ಧಿ ಬೇಕಿಲ್ಲ. ಎಚ್.ಡಿ. ದೇವೇಗೌಡರ ಕುಟುಂಬವನ್ನು ಮುಳುಗಿಸಲು ಹೊರಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರ ಪಟ್ಟಣದಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಿದ್ದು, ಕುಮಾರಸ್ವಾಮಿ ಅವರನ್ನು ಗೆಲ್ಲಿಸುವ ಮೂಲಕ ಸಾಬೀತು ಮಾಡಿದ್ದೇವೆ. ಸಿಎಂ ಆದಾಗ ಕೊಟ್ಟಿರುವ ಕಾರ್ಯಕ್ರಮ ಜನರ ಮನಸ್ಸಿನಲ್ಲಿ ಇದೆ. ಮಂಡ್ಯದ ಜನ ಕೀರ್ತಿ ತಂದು ಕೊಟ್ಟಿದ್ದಾರೆ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಿದ್ದಕ್ಕೆ ಹೆಚ್ಚು ಮತ ಬಂದಿದೆ ಎಂದರು. ರಾಜ್ಯದ ಅಭಿವೃದ್ಧಿಗೆ ನರೇಂದ್ರ ಮೋದಿಯವರ ಸಹಕಾರ ಬೇಕು ಆದರೆ ಕಾಂಗ್ರೆಸ್ ಗೆ ರಾಜ್ಯದ ಅಭಿವೃದ್ಧಿ ಬೇಕಿಲ್ಲ.ಎಚ್ ಡಿ ದೇವೇಗೌಡರ ಕುಟುಂಬವನ್ನು ಮುಳುಗಿಸಲು ಹೊರಟಿದ್ದಾರೆ.

ಕಾಂಗ್ರೆಸ್‌ನವರು ಬಿಜೆಪಿಯನ್ನು 40 ಪರ್ಸೆಂಟ್ ಕಮಿಷನ್ ಸರ್ಕಾರ ಅಂತಿದ್ರು. ಆದರೆ ಇದೀಗ ಕಾಂಗ್ರೆಸ್ 100 ಪರ್ಸೆಂಟ್ ಕಮಿಷನ್ ಸರ್ಕಾರ ಆಗಿದೆ ಎಂದು ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಶಾಸಕ ಜಿಟಿ ದೇವೇಗೌಡ ವಾಗ್ದಾಳಿ ನಡೆಸಿದರು.

> **ನಿಖಿಲ್ ಗೆ ಹೆಚ್ಚು ಜವಾಬ್ದಾರಿ ಇದೆ ಸೋಲೆ ಗೆಲುವಿನ ಮೆಟ್ಟಿಲಾಗಿದೆ. ಪಕ್ಷ ಕಟ್ಟುವುದಾಗಿ ಈ ಹಿಂದೆ ನಿಖಿಲ್ ಕುಮಾರಸ್ವಾಮಿ ಹೇಳಿದರು. ಅದರಂತೆ ಲೋಕಸಭೆ ಚುನಾವಣೆಯಲ್ಲಿ ನಿಖಿಲ್ ಸ್ಪರ್ಧೆ ಮಾಡಲಿಲ್ಲ. ಇದೇ ವೇಳೆ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಜಿಟಿ ದೇವೇಗೌಡ ಜನತಾದರ್ಶನಕ್ಕೆ ಅಧಿಕಾರಿಗಳನ್ನು ಕಳುಹಿಸದೆ ದುರಹಂಕಾರ ಮೆರೆದಿದೆ**
>
> **- ಜಿಟಿ ದೇವೇಗೌಡ, ಶಾಸಕ**

---

# ಫಸಲು ಬೇಡ, ಮರ ಉಳಿದರೆ ಸಾಕು

• **ಉದಯವಾಹಿನಿ, ಮೇಲುಕೋಟೆ**

ಎರಡು ವರ್ಷಗಳಿಂದ ಸರಿಯಾಗಿ ಮಳೆ ಬೆಳೆಯಿಲ್ಲದೆ ನಿರಂತರ ಬರಕ್ಕೆ ತುತ್ತಾಗಿದ್ದ ರೈತರಿಗೆ ಇದೀಗ ತೆಂಗು ಬೆಳೆಗೆ ತಗುಲಿರುವ ಕಪ್ಪುತಲೆ ಹುಳು ಬಾಧೆ ನಿದ್ದೆಗೆಡಿಸಿದೆ. ಫಸಲು ಬೇಡ, ಮರ ಉಳಿದರೆ ಸಾಕು ಎನ್ನುವಂತೆ ಆಗಿದೆ ರೈತರ ಪರಿಸ್ಥಿತಿ.

ಹೋಬಳಿಯ ಮಾಣಿಕ್ಯನಹಳ್ಳಿ, ಬೆಳ್ಳಾಳೆ, ಹಳೇಬಿಡು, ಹೊಸಕೋಟೆ, ಮಹದೇಶ್ವರಪುರ, ಪಾಂಡವಪುರ ಭಾಗಗಳಲ್ಲಿ ಕಪ್ಪು ತಲೆ ಹುಳು ಬಾದೆ ಹಾವಳಿ ಹೆಚ್ಚಾಗಿದ್ದು, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮೋನೋಕ್ರೋಟೊಪಾಸ್ ಅಥವಾ ಅಜಾಡಿರೆಕ್ಟನ್ ಕೀಟನಾಶಕವನ್ನು ಸಿಂಪಡಣೆ ಮಾಡಲು ರೈತರಿಗೆ ತರಬೇತಿ ಆರಂಭಿಸಿದ್ದಾರೆ.

ದಶಕಗಳಿಂದ ಕಪ್ಪುತಲೆ ಹುಳು ಬಾಧೆಯಿಂದ ಮರಗಳಗರಿ, ಸುಳಿ ಒಣಗಿ ಇಳುವರಿ ಕುಂಠಿತವಾಗಿದೆ ಎಂಬುದು ರೈತರ ಅಳಲು. ಮರಗಳನ್ನು ರೋಗದಿಂದ ರಕ್ಷಿಸಲಾಗದೆ ಹಲವು ರೈತರು ಕಡಿಯಲು ಮುಂದಾಗುತ್ತಾರೆ. ನುಸಿಪೀಡೆ, ಬೆಂಕಿ ರೋಗ, ಗಿಡಗಳ ಸುಳಿ ರೋಗಗಳಿಂದಲೂ ರೈತರು ಕಂಗಾಲಾಗಿದ್ದಾರೆ.'ಹೋಬಳಿಯ 70ಕ್ಕೂ ಹೆಚ್ಚು ಎಕರೆಯಲ್ಲಿ ಕಪ್ಪುತಲೆ ಹುಳು ಬಾಧೆ ಕಾಣಿಸಿಕೊಂಡಿದ್ದು, ರೈತರು ತೋಟಗಾರಿಕೆ ಇಲಾಖೆ ಎಚ್ಚುತ್ತುಕೊಳ್ಳಬೇಕು' ಎಂದು ರೈತ ಮಂಜುನಾಥ್ ಒತ್ತಾಯಿಸಿದ್ದಾರೆ. ಕಪ್ಪುತಲೆ ಹುಳು ವೈಜ್ಞಾನಿಕ ಹೆಸರು( ಒಪಿಸಿನ ಅರೆನೋಸೆಲ್ಲ) ಗಳು ತೆಂಗಿನ ಮರದ ಗರಿತಿನ್ನುವ ಹುಳುಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಈ ಕೀಟ ತೆಂಗು ಬೆಳೆಯುವ ಕರಾವಳಿ ಹಾಗೂ ಮೈದಾನ ಪ್ರದೇಶದಲ್ಲಿ ತೆಂಗಿನ ಬೆಳೆಗೆ ಹೆಚ್ಚಾಗಿ ಹಾನಿಯನ್ನುಂಟು ಮಾಡುತ್ತದೆ.

---

# 225 ಕೋಟಿ ವೆಚ್ಚದಲ್ಲಿ ರೇಷ್ಮೆಗೂಡು ಮಾರುಕಟ್ಟೆ


## ಹೈಟೆಕ್ ರೇಷ್ಮೆಗೂಡು ನಿರ್ಮಾಣದ ವಿಸ್ತೃತ ಸಮಗ್ರ ಯೋಜನಾ ವರದಿ ಸಿದ್ಧಗೊಳಿಸಿ ಸರ್ಕಾರಕ್ಕೆ ಸಲ್ಲಿಕೆ

• **ಉದಯವಾಹಿನಿ, ಶಿಡ್ಲಘಟ್ಟ**

ಶಿಡ್ಲಘಟ್ಟದ ಹೊರವಲಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹೈಟೆಕ್ ರೇಷ್ಮೆಗೂಡು ನಿರ್ಮಾಣದ ವಿಸ್ತೃತ ಸಮಗ್ರ ಯೋಜನಾ ವರದಿ (ಡಿ.ಪಿ.ಆರ್) ಸಿದ್ಧಗೊಳಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸುಮಾರು 225 ಕೋಟಿ ವೆಚ್ಚದ ಮಾರುಕಟ್ಟೆ ನಿರ್ಮಾಣಕ್ಕೆ ಡಿಪಿಆರ್ ವರದಿಯನ್ನು ಅಧಿಕಾರಿಗಳು ಸಿದ್ಧಪಡಿಸಿದ್ದಾರೆ.

ಉನ್ನತ ಶಿಕ್ಷಣ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂಸಿ ಸುಧಾಕರ್ ಅವರ ಕಚೇರಿಯಲ್ಲಿ ಇತ್ತೀಚೆಗೆ ಡಾ.ಎಂ.ಸುಧಾಕರ್, ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಶಿಡ್ಲಘಟ್ಟ ಕ್ಷೇತ್ರದ ಶಾಸಕ ಬಿ.ಎನ್.ರವಿಕುಮಾರ್, ಹಿರಿಯ ಅಧಿಕಾರಿಗಳು ಸಮಗ್ರ ಯೋಜನಾ ವರದಿಯನ್ನು ಪರಿಶೀಲಿಸಿ ಅಂತಿಮಗೊಳಿಸಿ ಸಲ್ಲಿಸಲು ಒಪ್ಪಿಗೆ ಸೂಚಿಸಿದ್ದಾರೆ.

ಶಿಡ್ಲಘಟ್ಟ-ದಿಬ್ಬೂರಹಳ್ಳಿ ಮಾರ್ಗದ ಹನುಮಂತಪುರ ಗ್ರಾಮದ ಬಳಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣ ಮಾಡುವುದಕ್ಕಾಗಿ 9.38 ಎಕರೆಯಷ್ಟು ಜಾಗವನ್ನು ಮೀಸಲಿಟ್ಟಿದ್ದು ರೇಷ್ಮೆ ಇಲಾಖೆಗೆ ಈಗಾಗಲೇ ಜಾಗ ಹಸ್ತಾಂತರವಾಗಿದೆ. ಪಹಣಿಯೂ ಆಗಿದೆ.


ಉದಯವಾಹಿನಿ ಚಿತ್ರ

**ಆರಂಭದಲ್ಲಿ 15ಕೋಟಿ:** ದಶಕದ ಹಿಂದೆಯೆ ಶಿಡ್ಲಘಟ್ಟದಲ್ಲಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿ ರ್ಮಾಣಕ್ಕೆಂದು ರಾಜ್ಯ ಸರ್ಕಾರ ಬಜೆಟ್‌ನಲ್ಲಿ 15 ಕೋಟಿ ಘೋಷಿಸಿತ್ತಾದರೂ ಕಾರ್ಯರೂಪಕ್ಕೆ ಬಂದಿ ರಲಿಲ್ಲ. 2023ರಲ್ಲಿ ಆಗಿನ ಸಿಎಂ ಬೊಮ್ಮಾಯಿ ಅವರು ಯೋಜನೆಯ ವೆಚ್ಚವನ್ನು 75ಕೋಟಿಗೆ ವೆಚ್ಚ ಹೆಚ್ಚಿಸಿ ಬಜೆಟ್‌ನಲ್ಲಿ ಘೋಷಿಸಿದ್ದರು.

ನಂತರ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಟೆಕ್ ಮಾರುಕಟ್ಟೆಗಾಗಿ ಬಜೆಟ್‌ನಲ್ಲಿ 75 ಕೋಟಿ ಮೀಸಲಿಟ್ಟಿದ್ದರು. ಕ್ಷೇತ್ರದ ಶಾಸಕ ಬಿ.ಎನ್.ರವಿ ಕುಮಾರ್ ಅವರು ಹೆಚ್ಚು ಆಸಕ್ತಿವಹಿಸಿ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಡಿಸಿ ಪಿ.ಎನ್.ರವೀಂದ್ರ ಅವರ ಮೇಲೆ ಒತ್ತಡಹಾಕಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣಕ್ಕೆ ಬೇಕಾದ ಜಾಗವನ್ನು ಇಲಾಖೆಗೆ ಹಸ್ತಾಂತರಿಸುವಲ್ಲಿ ಯಶಸ್ವಿಯಾದರು.

ಇದೀಗ ಅಧಿಕಾರಿಗಳು ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆಯ ನಿರ್ಮಾಣಕ್ಕೆ ಎರಡು ಹಂತದಲ್ಲಿ ಕಾಮಗಾರಿ ನಡೆಸುವ ಸಮಗ್ರ ಯೋಜನಾ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವರು. ಸರ್ಕಾರದಿಂದ ಅನುಮತಿ ಸಿಗುತ್ತಿದ್ದಂತೆ ಟೆಂಡರ್ ಕರೆದು ನಂತರ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ಕಾಮಗಾರಿ ಶುರುವಾಗಲಿದೆ. ಮಾರಾಟಕ್ಕೆ ಆವಕವಾಗುವ ರೇಷ್ಮೆ ಗೂಡನ್ನು ಬಿಡ್ ಮಾಡುವ ಬೃಹತ್ ಗೋದಾಮು, ಮಾರುಕಟ್ಟೆ ಅಧಿಕಾರಿಗಳ ಕಚೇರಿ, ವಸತಿ ಗೃಹ, ರೈತರ ವಿಶ್ರಾಂತಿ ಮತ್ತು ರಾತ್ರಿವೇಳೆ ತಂಗಲು ರೈತರಿಗೆ ವಸತಿಗೃಹ, ವಾಹನ ಪಾರ್ಕಿಂಗ್, ಕುಡಿಯುವ ನೀರು, ಶೌಚಾಲಯದಂತಹ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ. ಮಹಿಳಾ ರೈತರು ಮತ್ತು ಮಹಿಳಾ ರೀಲರುಗಳಿಗೂ ಪ್ರತ್ಯೇಕ ವಸತಿ ಗೃಹ, ವಿಶ್ರಾಂತಿ ಗೃಹ, ಮಕ್ಕಳು ಆಟ ಆಡಿಕೊಳ್ಳಲು ಆಟದ ಮೈದಾನ, ರೈತರು, ರೀಲರುಗಳ ಸಭೆ ನಡೆಸುವ ಸಭಾಂಗಣ, ರೇಷ್ಮೆಗೂಡಿನ ಗುಣಮಟ್ಟ ನಿರ್ಧರಿಸುವ ಕಕೂನ್ ಕ್ವಾಲಿಟಿ ಟೆಸ್ಟಿಂಗ್ ಸೆಂಟರ್ ಇನ್ನಿತರೆ ಸವಲತ್ತುಗಳನ್ನು ಮಾರುಕಟ್ಟೆಯಲ್ಲಿ ಕಲ್ಪಿಸಲಾಗುತ್ತದೆ.

ದೇಶದಲ್ಲಿಯೆ ಅತಿ ಹೆಚ್ಚು ರೇಷ್ಮೆಗೂಡು ವಹಿವಾಟು ನಡೆಯುವ ಶಿಡ್ಲಘಟ್ಟದಲ್ಲಿ ಹೈಟೆಕ್ ಮಾದರಿಯ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣ ಆಗಬೇಕೆಂಬುದು ಇಲ್ಲಿನ ರೈತರು, ರೀಲರುಗಳ ದಶಕಗಳ ಕನಸು ನನಸಾಗುವುದಕ್ಕೆ ಸಮಯ ಕೂಡಿ ಬಂದಂತಿದೆ.

> **ಅನುಮೋದನೆ ಸಿಕ್ಕ ನಂತರ ಮುಂದಿನ ಚಟುವಟಿಕೆ ಶಿಡ್ಲಘಟ್ಟ ಹೊರವಲಯದ ಹನುಮಂತಪುರ ಬಳಿ ಈಗಾಗಲೆ 9.38 ಎಕರೆಯಷ್ಟು ಜಾಗವನ್ನು ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣಕ್ಕೆಂದು ಮೀಸಲಿಟ್ಟಿದ್ದು ರೇಷ್ಮೆ ಇಲಾಖೆಗೆ ಹಸ್ತಾಂತರಿಸಿದ್ದು ಪಹಣಿಯೂ ಆಗಿದೆ. ಇದೀಗ 225 ಕೋಟಿ ವೆಚ್ಚದ ಮಾರುಕಟ್ಟೆ ನಿರ್ಮಾಣಕ್ಕೆ ಡಿಪಿಆರ್ ಅನ್ನು ಇಲಾಖೆಯ ಅಧಿಕಾರಿಗಳ ತಜ್ಞರ ತಂಡ ಸಿದ್ಧಗೊಳಿಸಿದ್ದಾರೆ. ರೇಷ್ಮೆ ಸಚಿವ ಕೆ.ವೆಂಕಟೇಶ್ ಸಮ್ಮುಖದಲ್ಲಿ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಡಿಪಿಆರ್‌ನ್ನು ಪರಿಶೀಲಿಸಿದ್ದು ಅಂತಿಮಗೊಂಡು ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಅನುಮೋದನೆ ಸಿಕ್ಕ ನಂತರ ಮುಂದಿನ ಚಟುವಟಿಕೆ ಆರಂಭಿಸಲಾಗುವುದು**
>
> **-ಬಿ.ಎನ್.ರವಿಕುಮಾರ್, ಶಾಸಕ ಶಿಡ್ಲಘಟ್ಟ.**

### ಟನ್‌ಗಟ್ಟಲೆ ರೇಷ್ಮೆ ವಹಿವಾಟು

**ರಾಜ್ಯದ ಮೂಲೆ ಮೂಲೆಗಳಿಂದಲ್ಲದೆ ನೆರೆಯ ಆಂಧ್ರ, ಮಹಾರಾಷ್ಟ್ರದ ಗಡಿಭಾಗದಿಂದಲೂ ಶಿಡ್ಲಘಟ್ಟದ ರೇಷ್ಮೆಗೂಡು ಮಾರುಕಟ್ಟೆಗೆ ಮಾರಾಟಕ್ಕೆಂದು ರೇಷ್ಮೆಗೂಡು ಆವಕವಾಗಲಿದ್ದು ದಿನವೂ ಟನ್ ಗಟ್ಟಲೆ ರೇಷ್ಮೆಗೂಡು ವಹಿವಾಟು ನಡೆದು ಕೋಟ್ಯಂತರ ರೂ. ವಹಿವಾಟು ನಡೆಯುವ ದೇಶದ ಅತಿ ದೊಡ್ಡ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ ಇದಾಗಿದೆ.**

---

## ಮಿನಿ ನ್ಯೂಸ್

### ಸರ್ಕಾರದ ವಿರುದ್ಧ ಹಿಂದೂಪರ ಸಂಘಟನೆಗಳ ಪ್ರತಿಭಟನೆ

• **ಉದಯವಾಹಿನಿ, ಮಂಡ್ಯ**

ಮಂಡ್ಯದ ಕೆರಗೋಡಿನಲ್ಲಿ ಹನುಮಧ್ವಜ ತೆರವು ವಿವಾದ ತೀವ್ರ ಪ್ರತಿಭಟನೆಗೆ ಕಾರಣವಾಗಿತ್ತು. ಇದರ ಬೆನ್ನಲ್ಲೇ ಇದೀಗ ಕೆ.ಆರ್.ಪೇಟೆ ಪಟ್ಟಣದಲ್ಲಿ ಅಳವಡಿಸಲಾಗಿದ್ದ ಭಗವಾಧ್ವಜವನ್ನು ತೆರವುಗೊಳಿಸಲಾಗಿದ್ದು, ಹಿಂದೂಪರ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಕೆ.ಆರ್.ಪೇಟೆಯ ಟಿಬಿ ವೃತ್ತದಲ್ಲಿ ಹಾಕಲಾಗಿದ್ದ ಭಗವಾಧ್ವಜವನ್ನು ಹಾಗೂ ಹಲವು ಮಹನೀಯರ ಫ್ಲೆಕ್ಸ್ ಗಳನ್ನು ಪುರಸಭೆ ಅಧಿಕಾರಿಗಳು ತೆರವು ಮಾಡಿದ್ದಾರೆ. ಇದನ್ನು ವಿರೋಧಿಸಿ ಹಿಂದೂ ಪರ ಸಂಘಟನೆ ಕಾರ್ಯಕರ್ತರು ಸ್ಥಳದಲ್ಲಿ ಧರಣಿ ನಡೆಸಿದ್ದಾರೆ. ಹತ್ತಾರು ವರ್ಷಗಳಿಂದ ಇದ್ದ ಭಗವಾಧ್ವಜವನ್ನು ಈಗ ಏಕಾಏಕಿ ತೆರವುಗೊಳಿಸಿದ್ದು ಯಾಕೆ ಭಗವಾಧ್ವಜದ ಜೊತೆಗೆ ಧ್ವಜ ಕಂಬವನ್ನೂ ತೆರವುಗೊಳಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ವೀಕೆಂಡ್ ಮಸ್ತಿಗಾಗಿ ನಂದಿಬೆಟ್ಟಕ್ಕೆ ದೌಡಾಯಿಸುತ್ತಿರುವ ಪ್ರವಾಸಿಗರು

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ವೀಕೆಂಡ್ ಹಿನ್ನೆಲೆಯಲ್ಲಿ ನಂದಿಬೆಟ್ಟಕ್ಕೆ ಜನಸಾಗರವೇ ಹರಿದು ಬರುತ್ತಿದೆ. ಮೋಡಕವಿದ ವಾತಾವರಣ, ಆಗಾಗ ಮಳೆಯ ಸಿಂಚನದ ನಡುವೆ ಪ್ರವಾಸಿಗರು ಸಾಗರೋಪಾದಿಯಲ್ಲಿ ನಂದಿಗಿರಿಧಾಮದತ್ತ ತೆರಳುತ್ತಿದ್ದು, 5 ಕಿ.ಮೀ ವರೆಗೂ ಟ್ರಾಫಿಕ್ ಜಾಮ್ ಸಂಭವಿಸಿದೆ. ಚಿಕ್ಕಬಳ್ಳಾಪುರದ ನಂದಿಬೆಟ್ಟ ರಸ್ತೆಯಲ್ಲಿ 5 ಕಿ.ಮೀ ವರೆಗೂ ಟ್ರಾಫಿಕ್ ಜಾಮ್ ಆಗಿದ್ದು, ರಸ್ತೆ ತುಂಬೆಲ್ಲ ವಾಹನಗಳು ಕಿಕ್ಕಿರಿದು ನಿಂತಿವೆ. ನಂದಿ ಬೆಟ್ಟದ ಚೆಕ್ ಪೋಸ್ಟ್ ನಿಂದ ಹಿಡಿದು ವಾಹನಗಳು ಸಾಲು ಸಾಲಾಗಿ ನಿಂತಿದ್ದು, ಇತರ ವಾಹನ ಸವಾರರು ಪರದಾಡುವಂತಾಗಿದೆ. ಮುಂಜಾನೆ 5 ಗಂಟೆಯಿಂದಲೂ ನಂದಿಬೆಟ್ಟದ ರಸ್ತೆ ಸಂಪೂರ್ಣ ಟ್ರಾಫಿಕ್ ಜಾಮ್ ಆಗಿದೆ. ನಂದಿಗಿರಿಧಾಮ ಪೊಲೀಸರು ಜನದಟ್ಟಣೆ ಹಾಗೂ ವಾಹನದಟ್ಟಣೆ ನಿಯಂತ್ರಿಸುವಲ್ಲಿ ಹೈರಾಣಾಗಿದ್ದಾರೆ. ನಂದಿಬೆಟ್ಟದಿಂದ ವಾಪಾಸ್ ಆಗುವವರು ಹಾಗೂ ನಂದಿಬೆಟ್ಟದತ್ತ ತೆರಳುತ್ತಿರುವರ ಸಂಖ್ಯೆ ಹೆಚ್ಚಾಗಿದ್ದು, ರಸ್ತೆಯ ಎರಡೂ ಬದಿಯಲ್ಲಿಯೂ ವಾಹನಗಳು ನಿಂತಲ್ಲೇ ನಿಲ್ಲುವಂತಾಗಿದೆ.

### ಕನ್ನಡ ಸಾಹಿತ್ಯ ಸಮ್ಮೇಳನ ನೂತನ ಕಚೇರಿ ಉದ್ಘಾಟನೆ

• **ಉದಯವಾಹಿನಿ, ಮಂಡ್ಯ**

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ಡಿಸೆಂಬರ್ 20, 21, 22 ರಂದು ನಡೆಯಲಿದ್ದು, ಅರ್ಥಪೂರ್ಣವಾಗಿ ಆಚರಿಸಲು ಜಿಲ್ಲಾಡಳಿತ ಸಿದ್ಧತೆ ಪ್ರಾರಂಭಿಸಿದೆ.ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ನೂತನ ಕಚೇರಿ ಉದ್ಘಾಟಿಸಿ ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿದರು. ಕಚೇರಿಯಲ್ಲಿ ಕವಿವಾಣಿಗಳ ಕಾವ್ಯದ ಸಿಂಚನಗಳ ಫಲಕಗಳನ್ನು ಅಳವಡಿಸಿ ಕನ್ನಡದ ಕಂಪು ಸೂಸುವಂತೆ ಮಾಡಲಾಗಿದೆ.ಕಚೇರಿ ಉದ್ಘಾಟನೆಯ ನಂತರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನಾರ್ಥ ಶ್ರೀಗಂಧದ ಗಿಡವನ್ನು ನೆಟ್ಟು ನೀರೆರೆದರು. ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆಯ ಶಾಸಕ ಪಿ.ರವಿಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ, ಜಿಲ್ಲಾಧಿಕಾರಿ ಕುಮಾರ, ಹೆಚ್ಚುವರಿ ಜಿಲ್ಲಾಧಿಕಾರಿ ಎಚ್. ಎಲ್. ನಾಗರಾಜು ಪಾಲ್ಗೊಂಡಿದ್ದರು

### ಏರ್‌ಪೋರ್ಟ್‌ನಿಂದ ನಂದಿಗೆ ಪ್ರವಾಸಿ ಸರ್ಕಿಟ್

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ರಾಜಧಾನಿ ಬೆಂಗಳೂರಿಗೆ ಮತ್ತು ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರವಿರುವ ಚಿಕ್ಕಬಳ್ಳಾಪುರವು ಪ್ರವಾಸೋದ್ಯಮದ ದೃಷ್ಟಿಯಿಂದ ಪ್ರಮುಖ ಸ್ಥಳ.ಪ್ರತಿ ಸರ್ಕಾರಗಳು ಸಹ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನದ ಮಾತನಾಡುತ್ತವೆ.

ವಿಶೇಷವಾಗಿ ನಂದಿಗಿರಿಧಾಮವನ್ನು ಕೇಂದ್ರವಾಗಿ ಇಟ್ಟುಕೊಂಡು ಪ್ರವಾಸೋದ್ಯಮ ಉತ್ತೇಜಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸುತ್ತವೆ. ಅದಕ್ಕೆ ನಿದರ್ಶನ ರೋಪ್ ವೇ. ಈಗ ಮತ್ತೊಂದು ಮಹತ್ವದ ಹೆಜ್ಜೆ ಎನ್ನುವಂತೆ ದೇವನಹಳ್ಳಿ ವಿಮಾನ ನಿಲ್ದಾಣದಿಂದ ನಂದಿಬೆಟ್ಟಕ್ಕೆ ಪ್ರವಾಸಿ ಸರ್ಕಿಟ್ ರೂಪಿಸಲು ಸರ್ಕಾರ ಚಿಂತಿಸಿದೆ. ಈ ವಿಚಾರವು ಸರ್ಕಾರ ರೂಪಿಸುತ್ತಿರುವ ನೂತನ ಪ್ರವಾಸೋದ್ಯಮ ನೀತಿಯಲ್ಲಿ ಅಡಕವಾಗಿದೆ ಎನ್ನುತ್ತವೆ ಪ್ರವಾಸೋದ್ಯಮ ಇಲಾಖೆ ಮೂಲಗಳು. ಈ ಪ್ರವಾಸಿ ಸರ್ಕಿಟ್‌ನಿಂದ ನಂದಿಗಿರಿಧಾಮವಷ್ಟೇ ಅಲ್ಲ ಚಿಕ್ಕಬಳ್ಳಾಪುರಕ್ಕೆ ಹೊಂದಿಕೊಂಡಿರುವ ಪ್ರವಾಸಿ ತಾಣಗಳು ಅಭಿವೃದ್ಧಿಗೊಳ್ಳುವ ಸಾಧ್ಯತೆ ಹೆಚ್ಚಿದೆ.

### ವೀರಶೈವ- ಲಿಂಗಾಯತ ಧರ್ಮ ಒಡೆಯಲು ಬಿಡುವುದಿಲ್ಲ

• **ಉದಯವಾಹಿನಿ, ಗುಬ್ಬಿ**

ರಾಜಕಾರಣಿಗಳು ವೀರಶೈವ ಮತ್ತು ಲಿಂಗಾಯತ ಧರ್ಮಗಳು ಬೇರೆ ಬೇರೆ ಎನ್ನುತ್ತಾ ಧರ್ಮವನ್ನು ಒಡೆಯಲು ಮುಂದಾಗಿರುವು ದು ದುರಾದೃಷ್ಟಕರ' ಎಂದು ರಂಭಾಪುರಿ ಪೀಠದ ರೇಣುಕಾ ವೀರಸೋ ಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು. ತಾಲ್ಲೂಕಿನ ನಿಟ್ಟೂರಿನಲ್ಲಿ ನಡೆದ ಗುಹೇಶ್ವರಸ್ವಾಮಿ ದೇಗುಲ ರಜತ ಮಹೋತ್ಸವ, ರೇಣುಕಾ ಜಯಂತಿ, ಧರ್ಮ ಜಾಗೃತಿ ಸಮಾರಂಭದಲ್ಲಿ ಮಾತನಾಡಿದರು. ಮಾನವ ಧರ್ಮ ಉದ್ಧಾರಕ್ಕಾಗಿ ರೇಣುಕಾಚಾರ್ಯ ಸ್ಥಾಪಿಸಿದ ವೀರಶೈವ ಧರ್ಮವನ್ನು 12ನೇ ಶತಮಾನದಲ್ಲಿ ಬಸವೇಶ್ವರರು ಉತ್ತುಂಗಕ್ಕೆ ಕೊಂಡೊಯ್ದಿದ್ದಾರೆ. ವೀರಶೈವ- ಲಿಂಗಾಯತ ಧರ್ಮ ಒಂದೇ ಆಗಿದ್ದು, ಅದನ್ನು ಒಡೆಯಲು ಬಿಡುವುದಿಲ್ಲ. ಸಮುದಾಯ ಒಗ್ಗಟ್ಟಿನಿಂದ ಇದ್ದು ಧರ್ಮವನ್ನು ಉಳಿಸಿಕೊಳ್ಳಬೇಕಿದೆ ಎಂದು ತಿಳಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಠ್ಯಪುಸ್ತಕದಲ್ಲಿ ಲಿಂಗಾಯತ ಧರ್ಮಸ್ಥಾಪಕ ಬಸವಣ್ಣ ಎಂದು ಹೇಳುವ ಮೂಲಕ ಅಪಚಾರ ಎಸಗಿದ್ದಾರೆ. ಸರ್ಕಾರ ಅದನ್ನು ಸರಿಪಡಿಸಲು ಮುಂದಾಗದಿದ್ದರೆ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದರು. ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮನುಕುಲದ ಉದ್ಧಾರಕ್ಕಾಗಿ ಪವಾಡ ಪುರುಷರು, ಶರಣರು ಧರ್ಮಕ್ಕೆ ಉತ್ತಮ ಅಡಿಪಾಯ ಹಾಕಿದ್ದರಿಂದಲೇ ವಿದೇಶಿಯರು ಭಾರತದ ಮೇಲೆ ಅನೇಕಬಾರಿ ದಾಳಿ ನಡೆಸಿದರೂ, ಸಂಸ್ಕೃತಿ, ಸಂಸ್ಕಾರವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಅಂತರಾಳದಿಂದ..
EDITORIAL

# ಹೆಣ್ಣುಮಕ್ಕಳ ಸಾಮೂಹಿಕ ಅತ್ಯಾಚಾರ ಕುರುಡಾಯಿತೇ ಸಮಾಜ?

ಕೊಡಗಿನ ನಾಗರಹೊಳೆ ಪ್ರದೇಶದಲ್ಲಿ ಅಪ್ರಾಪ್ತ ಬಾಲಕಿಯರಿಬ್ಬರು ತಮ್ಮ ಜೊತೆಗಿದ್ದ ಮೂವರು ಯುವಕರ ಜೊತೆ ಅಪರಿಚಿತರ ಕಾರಿನಲ್ಲಿ ಪ್ರಯಾಣಿಸುವ ವೇಳೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಮೊದಲೇ ಕಾರಿನಲ್ಲಿದ್ದ ಇಬ್ಬರು ಯುವಕರು ಒಬ್ಬ ಬಾಲಕಿಯನ್ನು ಹೊರಗೆಳೆದು ಅತ್ಯಾಚಾರ ಮಾಡಿದರೆ, ಮತ್ತೊಬ್ಬ ಬಾಲಕಿಯ ಮೇಲೆ ಜೊತೆಗಿದ್ದ ಪರಿಚಿತ ಮೂವರು ಯುವಕರೇ ಅತ್ಯಾಚಾರಕ್ಕೆ ಯತ್ನಿಸಿದ್ದಾರೆ. ಈ ಪ್ರಕರಣದಲ್ಲಿ ಐವರು ಯುವಕರ ಬಂಧನವಾಗಿದೆ. ಘಟನೆ ನಡೆದು ಮೂರ್ನಾಲ್ಕು ದಿನಗಳ ನಂತರ ಈ ಪ್ರಕರಣ ಬೆಳಕಿಗೆ ಬಂದಿದೆ. ಮುಖ್ಯವಾಹಿನಿಯ ಮಾಧ್ಯಮಗಳಿಗೆ ಇದು ಸುದ್ದಿಯೇ ಅಲ್ಲ. ಶ್ರೀಮಂತರ ಮನೆಯ ಮದುವೆ, ಔತಣ, ಸಂಗೀತ ಕಾರ್ಯಕ್ರಮದ ಲೈವ್ ಪ್ರಸಾರ ಮಾಡುವುದರಲ್ಲಿ ಅವರೆಲ್ಲ ಮಗ್ನರಾಗಿದ್ದಾರೆ. ಅತ್ಯಾಚಾರದಂತಹ ಘೋರ ಪ್ರಕರಣಗಳನ್ನು ಸುದ್ದಿ ಮಾಡುವುದರಲ್ಲೂ ಧರ್ಮ, ವರ್ಗದ ಆಧಾರದಲ್ಲಿ ಮಾಧ್ಯಮಗಳು ಹೇಗೆ ವರ್ತಿಸುತ್ತಿವೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಕೊಡಗಿನಲ್ಲಿ ಇತ್ತೀಚೆಗಷ್ಟೇ ಅತ್ಯಾಚಾರಕ್ಕೊಳಗಾದ ಯುವತಿ ಆತ್ಮಹತ್ಯೆಗೆ ಶರಣಾಗಿದ್ದಳು. ಅತ್ಯಾಚಾರಿ ಆಕೆಯ ಕುಟುಂಬದವರನ್ನು ಬೆದರಿಸಿದ ಕಾರಣಕ್ಕೆ ಸಂತ್ರಸ್ತ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಹಳ್ಳಿಗಾಡು ಪ್ರದೇಶಗಳಲ್ಲಿ ಅತ್ಯಾಚಾರ ಪ್ರಕರಣದಲ್ಲಿ ದೂರು ದಾಖಲಾಗುವುದು, ಸುದ್ದಿಯಾಗುವುದು ಕೆಲವೇ ಕೆಲವು. ಬಹಳಷ್ಟು ಪ್ರಕರಣಗಳು ಯುವತಿಯರ ಜೊತೆಗೇ ಸಮಾಧಿಯಾಗುತ್ತಿವೆ. ಕುಟುಂಬದ ಮರ್ಯಾದೆ ಹೆಸರಿನಲ್ಲಿ ಹಲವು ಯುವತಿಯರ ಸಾವುಗಳಿಗೆ ಕುಟುಂಬದವರೇ ನ್ಯಾಯವನ್ನು ನಿರಾಕರಿಸುತ್ತಿರುವುದು ವಿಪರ್ಯಾಸ. ಇತ್ತ ತುಮಕೂರಿನಲ್ಲಿ ಹನ್ನೊಂದು ವರ್ಷದ ಬಾಲಕಿಯನ್ನು ಆಕೆಯ ಚಿಕ್ಕಮ್ಮ ಆಂಧ್ರಪ್ರದೇಶದ ವ್ಯಕ್ತಿಗೆ 35,000 ರೂಪಾಯಿಗೆ ಮಾರಾಟ ಮಾಡಿದ ಪ್ರಕರಣ ವರದಿಯಾಗಿದೆ. ಪೊಲೀಸರು ಬಾಲಕಿಯನ್ನು ರಕ್ಷಿಸಿದ್ದಾರೆ. ಬಾತುಕೋಳಿ ಮಾರಿಕೊಂಡು ಬಂದಿದ್ದ ವ್ಯಾಪಾರಿಗೆ ಬಾಲಕಿಯನ್ನು ಮಾರಲಾಗಿತ್ತು. ಹನ್ನೊಂದು ವರ್ಷದ ಬಾಲಕಿಯನ್ನು ವ್ಯಾಪಾರಿಯೊಬ್ಬನಿಗೆ ಮಾರಾಟ ಮಾಡಿದ ಆಕೆಯ ಮನಸ್ಥಿತಿ ಎಂಥದ್ದು ಇದರ ಹಿಂದಿನ ಅಸಹಾಯಕತೆಯನ್ನು ಸಮಾಜ ಅರ್ಥ ಮಾಡಿಕೊಳ್ಳಬೇಕಿದೆ.

> **ಈ ಸಮಾಜ ಹೆಣ್ಣುಮಕ್ಕಳ ಬಗ್ಗೆ ಸಂವೇದನಾಶೂನ್ಯವಾಗಿದೆ. ಗಂಡು ಮಕ್ಕಳ ನಡವಳಿಕೆಗಳು ಬದಲಾಗುವ ಲಕ್ಷಣಗಳು ಕಾಣುತ್ತಿಲ್ಲ. ಬಡತನ, ಅದರ ಮುಂದುವರಿಕೆಯಾಗಿ ಅರ್ಧಕ್ಕೆ ಶಿಕ್ಷಣವನ್ನು ಮೊಟಕುಗೊಳಿಸುತ್ತಿರುವ ದೊಡ್ಡ ಯುವ ಸಮೂಹ ದುಶ್ಚಟಗಳಿಗೆ ಬಲಿಯಾಗುತ್ತಿದೆ. ಅಂತಹ ಯುವಕರೇ ಇಂದು ಸಂಘಟಿತ ಸಮಾಜಘಾತಕ ಕೃತ್ಯಗಳಿಗೂ ಬಳಕೆಯಾಗುತ್ತಿದ್ದಾರೆ.**

ಒಂದು ಕಡೆ ಪ್ರೀತಿ ನಿರಾಕರಣೆಯ ಕಾರಣಕ್ಕೆ ಪ್ರೀತಿಸಿದವರಿಂದಲೇ ಯುವತಿಯರು ಕೊಲೆಯಾಗುತ್ತಿದ್ದಾರೆ. ಮತ್ತೊಂದು ಕಡೆ ಅತ್ಯಾಚಾರ ಎಂಬ ಪಿಡುಗು ನಿತ್ಯ ನಿರಂತರವಾಗಿ ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ಕಾಡುತ್ತಿದೆ. ಬಡತನ, ಅಸಹಾಯಕತೆಯ ಕಾರಣಕ್ಕೆ ಭ್ರೂಣಹತ್ಯೆ, ಹೆಣ್ಣುಮಕ್ಕಳ ಮಾರಾಟ, ಬಾಲ್ಯವಿವಾಹ, ವೇಶ್ಯಾವಾಟಿಕೆಗೆ ತಳ್ಳುವ ವಿಕೃತಿ ಹೀಗೆ ಎಲ್ಲದಕ್ಕೂ ಬಡ ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ. ಸರ್ಕಾರ, ಕಾನೂನು, ಕೋರ್ಟು ಅಷ್ಟೇ ಅಲ್ಲ, ಇಡೀ ನಾಗರಿಕ ಸಮಾಜ ಹೆಣ್ಣುಮಕ್ಕಳಿಗೆ ಘನತೆಯ ಬದುಕು ಕಲ್ಪಿಸುವಲ್ಲಿ ಸೋತಿವೆ ಎಂದೇ ಹೇಳಬೇಕಾಗಿದೆ. ಇರುವುದರಲ್ಲಿಯೇ ಕಠಿಣ ನಿಯಮ ಒಳಗೊಂಡ ಪೋಕ್ಸೊದಂತಹ ಅಪ್ರಾಪ್ತ ಮಕ್ಕಳ (ಹೆಣ್ಣು, ಗಂಡು) ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಗೇ ನಮ್ಮ ಪೊಲೀಸರು ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ. ಅದು ಉಳ್ಳವರಿಗೊಂದು, ಸಾಮಾನ್ಯರಿಗೊಂದು ಎಂಬಂತಾಗಿದೆ. ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ಮೇಲಿನ ಪೋಕ್ಸೊ ಪ್ರಕರಣದಲ್ಲಿ ಪೊಲೀಸರು ನಡೆದುಕೊಂಡ ರೀತಿ ಇದಕ್ಕೊಂದು ಉತ್ತಮ ಉದಾಹರಣೆ. ಪೋಕ್ಸೊ ಪ್ರಕರಣ ದಾಖಲಾದ 24 ಗಂಟೆಯೊಳಗೆ ಆರೋಪಿಯ ಬಂಧನವಾಗಬೇಕು ಎಂದು ಪೋಕ್ಸೊ ನಿಯಮ ಹೇಳುತ್ತದೆ. ಆದರೆ, ಯಡಿಯೂರಪ್ಪ ಅವರ ಪ್ರಕರಣದಲ್ಲಿ ಬಂಧನ ಆಗಿಲ್ಲ ಎಂಬುದು ಒಂದು ಲೋಪವಾದರೆ, ಸಿಐಡಿ ಅಧಿಕಾರಿಗಳು ಮೂರು ತಿಂಗಳು ಯಾವುದೇ ಪ್ರಕ್ರಿಯೆ ನಡೆಸಿಯೇ ಇಲ್ಲ. ಬಾಲಕಿಯ ತಾಯಿ ನಿಧನರಾಗಿದ್ದು, ಸಹೋದರ ಹೈಕೋರ್ಟ್ ಮೊರೆ ಹೋದ ನಂತರ ಯಡಿಯೂರಪ್ಪ ವಿರುದ್ಧ ಬಂಧನ ವಾರಂಟ್ ಜಾರಿಯಾಗಿತ್ತು. ಬಂಧನ ಭೀತಿಯಿಂದ ಮೂರು ದಿನ ನಾಪತ್ತೆಯಾಗಿದ್ದ ಆರೋಪಿ ನಿರೀಕ್ಷಣಾ ಜಾಮೀನು ಪಡೆದು ನಂತರ ತನಿಖಾಧಿಕಾರಿಗಳ ಮುಂದೆ ಹಾಜರಾಗಿದ್ದರು. ಇದು ಎಂತಹ ಕಠಿಣ ಕಾನೂನನ್ನೂ ನಮ್ಮ ಅಧಿಕಾರಸ್ಥರು, ಅಧಿಕಾರಿಗಳು ನಗಣ್ಯ ಮಾಡಿಬಿಡುತ್ತಾರೆ ಎಂಬುದಕ್ಕೆ ಸ್ಪಷ್ಟ ಉದಾಹರಣೆ. ಈ ಸಮಾಜ ಹೆಣ್ಣುಮಕ್ಕಳ ಬಗ್ಗೆ ಸಂವೇದನಾಶೂನ್ಯವಾಗಿದೆ. ಗಂಡು ಮಕ್ಕಳ ನಡವಳಿಕೆಗಳು ಬದಲಾಗುವ ಲಕ್ಷಣಗಳು ಕಾಣುತ್ತಿಲ್ಲ. ಬಡತನ, ಅದರ ಮುಂದುವರಿಕೆಯಾಗಿ ಅರ್ಧಕ್ಕೆ ಶಿಕ್ಷಣವನ್ನು ಮುಕ್ತಾಯ ಮಾಡುತ್ತಿರುವ ದೊಡ್ಡ ಯುವ ಸಮೂಹ ದುಶ್ಚಟಗಳಿಗೆ ಬಲಿಯಾಗುತ್ತಿದೆ. ಅಂತಹ ಯುವಕರೇ ಸಂಘಟಿತ ಸಮಾಜಘಾತಕ ಕೃತ್ಯಗಳಿಗೆ ಬಳಕೆಯಾಗುತ್ತಿದ್ದಾರೆ. ನಟ ದರ್ಶನ್ ಪ್ರಕರಣದಲ್ಲಿ ಸಿಲುಕಿ ಹಾಕಿಕೊಂಡ ಯುವಕರ ಹಿನ್ನಲೆ ನೋಡಿದರೆ ಅರ್ಥವಾಗುತ್ತದೆ. ದುಶ್ಚಟ, ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಸಮಾಜದ್ರೋಹಿಗಳಾಗುತ್ತಿರುವ ಯುವ ಸಮೂಹವನ್ನು ತಿದ್ದುವ ಕಡೆಗೆ ಸಮಾಜ ಸಾಗುತ್ತಿಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಅಂತಹ ವಿದ್ಯಾರ್ಥಿಗಳನ್ನು ಸರಿ ದಾರಿಗೆ ತರುವ ಪ್ರಯತ್ನ ಮಾಡುತ್ತಿಲ್ಲ. ಮನೆಯಲ್ಲೂ ಸರಿಯಾದ ಮಾರ್ಗದರ್ಶನ ಇಲ್ಲ. ಎಲ್ಲರೂ ಯಾಂತ್ರಿಕವಾಗಿ ತಮ್ಮ ತಮ್ಮ ಕೆಲಸ ಮಾಡುತ್ತಾ, ನಮಗ್ಯಾಕೆ ಇಲ್ಲದ ಉಸಾಬರಿ ಎಂಬ ಉದಾಸೀನತೆಯಲ್ಲಿರುತ್ತಾರೆ. ಈ ಸಾಮೂಹಿಕ ನಿರ್ಲಕ್ಷ್ಯದ ನಡವಳಿಕೆಗಳ ಪರಿಣಾಮ ಬಲಿಪಶುವಾಗುತ್ತಿರುವುದು ಹೆಣ್ಣುಮಕ್ಕಳು. ಹೆಣ್ಣುಮಕ್ಕಳ ಸುರಕ್ಷತೆ ಎಲ್ಲರ ಹೊಣೆ. ಸಾಮೂಹಿಕ ಅತ್ಯಾಚಾರ, ಕೊಲೆ, ಮಕ್ಕಳ ಮಾರಾಟ, ಮಾನವ ಕಳ್ಳಸಾಗಣೆ, ವೇಶ್ಯಾವಾಟಿಕೆ ಸಾಮಾಜಿಕ ಪಿಡುಗು. ಇದರ ನಿರ್ಮೂಲನೆಯಾಗದ ಹೊರತು ಯಾವುದೇ ಸಮಾಜ ಸ್ವಸ್ಥ ಸಮಾಜ ಎನಿಸದು. ಸರ್ಕಾರ, ಅಧಿಕಾರಿಗಳು, ಜವಾಬ್ದಾರಿಯುತ ನಾಗರಿಕರು ಎಲ್ಲರೂ ಸೇರಿ ಈ ಸಮಾಜದ ಮುಖ್ಯ ಭಾಗವಾದ ಮಹಿಳಾ ಸಮೂಹವನ್ನು ರಕ್ಷಿಸುವ ಪಣ ತೊಡಬೇಕಿದೆ.

# ಮಹಾಭಾರತ



## ಸ್ತ್ರೀ ಪರ್ವ

• ಹಿಂದಿನ ಸಂಚಿಕೆಯಿಂದ

ಗಾಂಧಾರಿಯು ಕೃಷ್ಣನೊಂದಿಗೆ ಮಾತನಾಡುತ್ತ, ತನ್ನ ಮಕ್ಕಳ ಶರೀರಗಳನ್ನು, ಅಳುತ್ತಿರುವ ತನ್ನ ಸೊಸೆಯರನ್ನು ತೋರಿಸುತ್ತ, ದುರ್ಯೋಧನನಿರುವ ಸ್ಥಳಕ್ಕೆ ಬಂದಳು. ಅಲ್ಲಿ ದುಃಖವನ್ನು ತಡೆಯಲಾರದೆ ಮೂರ್ಛೆಹೋದಳು. ಎಚ್ಚೆತ್ತು ಪುನಃ ಮೂರ್ಛೆಹೋದಳು. ಅತ್ತು ಅತ್ತು ಸುಸ್ತಾದಳು. ಮಗನ ಮುಖವನ್ನು ನೇವರಿಸಿದಳು. ರಕ್ತಹರಿದು ಗಂಟುಕಟ್ಟಿಕೊಂಡಿದ್ದ ತಲೆಗೂದಲನ್ನು ಬಿಡಿಸಿ ತಿದ್ದಿದಳು. ಕೃಷ್ಣನು ಸುಮ್ಮನೆ ನೋಡುತ್ತಿದ್ದನು. ದುರ್ಯೋಧನನ ಹೆಂಡತಿಯಂತೂ ಗಂಡನ ಹಾಗು ಮಗನ ದೇಹದ ನಡುವೆ ಕುಳಿತು ಯಾರಿಗಾಗಿ ಅಳಬೇಕೆಂದು ತೋರದೆ ಒದ್ದಾಡುತ್ತಿದ್ದಳು. ಉತ್ತರೆಯು ಅಭಿಮನ್ಯುವಿನ ದೇಹದ ಮೇಲೆ ಬಿದ್ದು ಗೋಳಾಡುತ್ತಿದ್ದಳು. ಅವರ ಮದುವೆಯಾಗಿ ಕೇವಲ ಆರು ತಿಂಗಳಾಗಿತ್ತು. ರಾಧೇಯನ ಹೆಂಡತಿ, ಶಲ್ಯನ ಹೆಂಡಂದಿರು. ಎಲ್ಲಿ ನೋಡಿದರೂ ಅಳು. ಗಾಂಧಾರಿಯ ಕೃಷ್ಣನಿಗೆ ಇಂಥ ಎಷ್ಟೋ ದೃಶ್ಯಗಳನ್ನು ತೋರಿಸಿದಳು.

ಇದ್ದಕ್ಕಿದ್ದಂತೆ ಗಾಂಧಾರಿಯ ಕೋಪ ಉಲ್ಬಣವಾಯಿತು. ''ಕೃಷ್ಣ, ಇದೆಲ್ಲ ನೀನು ಉದಾಸೀನನಾಗಿದ್ದುದರ ಫಲ. ನೀನು ಇಚ್ಛಿಸಿದ್ದರೆ ಇಷ್ಟೆಲ್ಲ ಆಗದಂತೆ ತಡೆಯಬಹುದಾಗಿತ್ತು. ನೀನು ನಿಷ್ಪಕ್ಷಪಾತನಾಗಿ ಇದ್ದಿದ್ದರೆ, ಮತ್ತು ಪ್ರಯತ್ನಪಟ್ಟಿದ್ದರೆ, ಕೌರವ ಪಾಂಡವರ ನಡುವಣ ದ್ವೇಷವನ್ನು ಇಲ್ಲದ ಹಾಗೆ ಮಾಡಬಹುದಾಗಿತ್ತು, ಈ ಸರ್ವನಾಶವನ್ನು ತಡೆಯಬಹುದಾಗಿತ್ತು. ನನ್ನ ತಪಸ್ಸಿನ ಫಲವೇನಾದರೂ ಇದ್ದರೆ, ಅದನ್ನು ಬಳಸಿ ಕುರುವಂಶದ ನಾಶಕ್ಕೆ ಕಾರಣನಾದ ನಿನ್ನನ್ನು ಶಪಿಸುತ್ತೇನೆ. ದಾಯಾದಿಮತ್ಸರದಿಂದ ಕುರುವಂಶವು ನಿರ್ನಾಮವಾದಂತೆಯೇ, ಇಂದಿಗೆ ಮೂವತ್ತಾರು ವರ್ಷಗಳ ನಂತರ, ನಿಮ್ಮ ವೃಷ್ಣಿವಂಶವೂ ತನ್ನಿಂದ ತಾನೇ ದಾಯಾದಿಗಳ ನಡುವಣ ಹೋರಾಟದಿಂದ ನಾಶವಾಗಲಿ. ಇಲ್ಲಿ ಈಗ ಹೆಂಗಸರು ಹೇಗೆ ಅಳುತ್ತಿರುವರೋ ಹಾಗೆಯೇ ನಿಮ್ಮ ಹೆಂಗಸರೂ ಕಣ್ಣೀರು ಸುರಿಸಲಿ. ಇದು ಗಾಂಧಾರಿಯ ಶಾಪ ಎಂದಳು.

ಕಷ್ಣನು ನಕ್ಕು ''ಅಮ್ಮ, ವೃಷ್ಣಿವಂಶವನ್ನು ನಾಶಮಾಡಬಲ್ಲವನು ನಾನೊಬ್ಬ ಮಾತ್ರ ಎಂಬುದು ನನಗೆ ಗೊತ್ತು. ಹೊರಗಿನ ಯಾರೂ ಅವರನ್ನು ಸೋಲಿಸಲಾರರು; ಅವರವರೇ ಹೊಡೆದಾಡಿ ಸಾಯಬೇಕು. ನಿನ್ನ ಶಾಪವು ನನ್ನ ಸಮಸ್ಯೆಯನ್ನು ಹಗುರಾಗಿಸಿದೆ. ಸಂತೋಷ. ಅಮ್ಮ, ವೃಷ್ಣಿವಂಶನಾಶದ ಕೆಲಸದಲ್ಲಿ ನಿನ್ನ ಶಾಪದ ಬೆಂಬಲವನ್ನಿತ್ತುದಕ್ಕಾಗಿ ನಾನು ಕೃತಜ್ಞ. ಅದು ನಮಗೆ ಆಶೀರ್ವಾದ ಎಂತಲೇ ಹೇಳಬೇಕು. ಈ ಶಾಪದಿಂದ ನಿನ್ನ ಕೋಪವು ಈಗ ಹೊರಬಿದ್ದಿದೆಯಲ್ಲವೆ? ಇನ್ನು ನೀನು ಯುಧಿಷ್ಠಿರನ ಮೇಲೆ ಸಿಟ್ಟು ಮಾಡಬಾರದು.

ನಾನು ಪಾಂಡವರಿಗಾಗಿ ಏನನ್ನು ಮಾಡಲೂ ಸಿದ್ಧ. ನನ್ನ ಮನೆಯೇ ಸರ್ವನಾಶವಾಗಿ ಅವರು ಉಳಿಯುವುದಾದರೆ, ಅದಕ್ಕೂ ನಾನು ಸಿದ್ಧ. ಅಮ್ಮ, ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ, ಪಾಂಡವರೇ ನನ್ನ ಜೀವದ ಜೀವ ಎಂದನು. ಇದನ್ನೆಲ್ಲವನ್ನು ಕೇಳುತ್ತಿದ್ದ ಪಾಂಡವರು, ವೃಷ್ಣಿವಂಶಕ್ಕೂ ಇದೇ ಗತಿ ಕಾದಿದೆ ಎಂದು ತಿಳಿದು ಭಯಪಟ್ಟುಹೋದರು. ಆದರೆ ಕೃಷ್ಣನು ಇದನ್ನೆಲ್ಲವನ್ನೂ ನಗುನಗುತ್ತಲೇ ಹೇಳುತ್ತಿರುವನು ತಮ್ಮ ಬಾಳ್ವೆಗಾಗಿ ಅದಣ್ಣವನು ಮಾಡುವನು ಕೃಷ್ಣನ ಪ್ರೇಮದೆದುರು ತಾವು ತುಂಬ ಚಿಕ್ಕವರು ಎಂದು ಅವರಿಗೆ ಅನಿಸಿತು. ಕೃಷ್ಣನು ಗಾಂಧಾರಿಯನ್ನು ಕುರಿತು, ''ಅಮ್ಮ, ನಿನ್ನ ಧರ್ಮಬುದ್ಧಿ ಜಾಗೃತವಾಗಲಿ. ಈ ದುಃಖ ನಿನಗೆ ಒಳ್ಳೆಯದಲ್ಲ. ಇದೆಲ್ಲವೂ ಆಗಿದ್ದು ನಿನ್ನಿಂದಲೇ ಹೊರತು ನನ್ನಿಂದಲ್ಲ.

ಮುಂದುವರೆಯುವುದು...


---

ನಿಗದಿಯಾಗಿದ್ದ ಒಂದು ಶಾಲೆಯ ಉದ್ಘಾಟನೆಗೆ ಶಾಲೆಯ ಮುಖ್ಯಸ್ಥರು ಮತ್ತು ಶಿಕ್ಷಣ ಸಚಿವರು ಮುಖ್ಯಮಂತ್ರಿಯಾಗಿದ್ದ ಕಾಮರಾಜ್ ರವರ ಮನೆಗೆ ನಿಗದಿತ ಸಮಯಕ್ಕೆ ಕರೆದುಕೊಂಡು ಹೋಗಲು ಬಂದಿರುತ್ತಾರೆ.ಶಿಕ್ಷಣ ಸಚಿವರು ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ನಿಗದಿತ ಸಮಯಕ್ಕೆ ಹಾಜರಾಗಲು ತಿಳಿಸಿದ್ದರಂತೆ, ಆಗ ಅವರು ಕೊಟ್ಟ ಉತ್ತರ, ರಾತ್ರಿ ಒಣಗಲು ಹಾಕಿದ್ದ ಪಂಚೆ, ಶರ್ಟು ಸ್ವಲ್ಪ ತೇವಾಂಶ ಇದೆ ಇನ್ನು ಐದು ನಿಮಿಷದಲ್ಲಿ ಹೊರಡಲು ಸಿದ್ಧತೆ ಮಾಡಿಕೊಳ್ಳೋಣ ಎಂದು ತಿಳಿಸಿದರಂತೆ. ಇದರಲ್ಲಿ ಅವರ ಸಾಮಾನ್ಯ, ಸರಳತೆ ಎಷ್ಟಿದೆ ಎಂಬುದನ್ನು ನಾವುಗಳು ಮಿಗಿಲಾಗಿ ಈಗಿನ ರಾಜಕಾರಣಿಗಳು ಅರ್ಥಮಾಡಿಕೊಳ್ಳಬೇಕಾಗಿದೆ.



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಭಾರತರತ್ನ ಮಾಜಿ ಮುಖ್ಯಮಂತ್ರಿ ಕೆ.ಕಾಮರಾಜ್ ರ 121ನೇ ವರ್ಷದ ಜನ್ಮಜಯಂತಿ



ಉದಯವಾಹಿನಿ ಚಿತ್ರ

ಕೆ. ಕಾಮರಾಜ್ ರವರು 1903 ಜುಲೈ 15 ರಂದು ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯಲ್ಲಿ ಜನಿಸಿದರು. ತಂದೆ ಕುಮಾರಸ್ವಾಮಿ ನಾಡರ್, ತಾಯಿ ಶಿವಕಾಯಿ ಅಮ್ಮಾಳ್. ಇವರು ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ತಂದೆ ತೀರಿಕೊಂಡಿದ್ದರಿಂದ ಅವರ ವ್ಯಾಸಂಗ ಅಲ್ಲಿಗೆ ನಿಂತಿತ್ತು. ನಂತರ ಸೋದರಮಾವನ ಬಟ್ಟೆಯಂಗಡಿಯಲ್ಲಿ ಜೀವನ ನಿರ್ವಹಣೆಗೆ ಕೆಲಸ ಮಾಡಲಾರಂಭಿಸಿದರು. ತಮ್ಮ 13ನೇ ವಯಸ್ಸಿನಲ್ಲಿಯೇ ರಾಜಕೀಯದಲ್ಲಿ ಆಸಕ್ತಿ ತೋರಿದರು. ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿ ಪ್ರಸಿದ್ಧ ವಾಗ್ಮಿಗಳಾಗಿದ್ದ ಡಾ.ವರದರಾಜು ನಾಯ್ಡು, ಜಾರ್ಜ್ ಜೋಸೆಫ್ ಮೊದಲಾದವರ ಭಾಷಣ ಗಳಿಂದ ಸ್ಫೂರ್ತಿ ಪಡೆದರು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ರಾದರು. ಸಾರ್ವಜನಿಕ ಸಭೆ ಸಮಾರಂಭಗಳನ್ನು ಆಯೋಜಿಸುವದರೊಂದಿಗೆ ಹಣ ಸಂಗ್ರಹಿಸಿ ಕಾಂಗ್ರೆಸ್ ಪಕ್ಷಕ್ಕೆ ನೀಡುತ್ತಿದ್ದರು. 1930 ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಕಾಮ್ ರಾಜರು ಭಾಗವಹಿಸಿದರು.

ಬ್ರಿಟೀಷ್ ಸರ್ಕಾರ ಅವರನ್ನು ಬಂಧಿಸಿ ಎರಡು ವರ್ಷಗಳು ಸಜೆ ವಿಧಿಸಿದರು. ಬಿಡುಗಡೆ ನಂತರ ಹೋರಾಟದಲ್ಲಿ ಭಾಗವಹಿಸುತ್ತಿದ್ದರು.

1942 ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕೆ ಬ್ರಿಟೀಷ್ ಸರ್ಕಾರ ಮತ್ತೆ ಸೆರೆಮನೆಗೆ ಕಳುಹಿಸಿತು. ಸೆರೆಮನೆಯಲ್ಲಿದ್ದಾಗ ಗ್ರಂಥ ಅಧ್ಯಯನದಿಂದ ತಮ್ಮ ಜ್ಞಾನವನ್ನು ಗುರುತಿಸಿಕೊಂಡರು.

1940 ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. 1952 ರಲ್ಲಿ ಲೋಕಸಭೆಗೆ ಆಯ್ಕೆಯಾಗಿ 1954 ರವರೆಗೆ ಸದಸ್ಯರಾಗಿದ್ದರು. 1954 ರಲ್ಲಿ ಮದ್ರಾಸ್ ಪ್ರಾಂತದ ಮುಖ್ಯಮಂತ್ರಿಗಳಾದರು. ಸಚಿವ ಸಂಪುಟಕ್ಕೆ ಹೇಳಿದ ಕಿವಿ ಮಾತೇನೆಂದರೆ, ಸಮಸ್ಯೆಗಳನ್ನು ಎದುರಿಸಿ, ಅವುಗಳನ್ನ ಮುಚ್ಚಿಡಬೇಡಿ ಅವುಗಳ ಪರಿಹಾರಕ್ಕೆ ಮಾರ್ಗಗಳನ್ನು ಕಂಡುಹಿಡಿಯಿರಿ.ನೀವು ಏನನ್ನಾದರೂ ಒಳಿತನ್ನು ಮಾಡಿದರೆ ಜನರು ಸಂತೋಷಪಟ್ಟು ತೃಪ್ತಿ ಗೊಳ್ಳುತ್ತಾರೆ. ಎಂದು ಜಾಗೃತಿ ಮೂಡಿಸಿರುತ್ತಾರೆ. ಅವರ ಆಡಳಿತ ಅವಧಿಯಲ್ಲಿಯೇ ಮದ್ರಾಸ್ ರಾಜ್ಯಕ್ಕೆ ತಮಿಳ್ ನಾಡು ಎಂದು ನಾಮಕರಣ ಮಾಡಲಾಯಿತು.ಕಾಮರಾಜರು ಮುಖ್ಯಮಂತ್ರಿಗಳಾಗಿ ತಮಿಳುನಾಡಿನ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಿದರು. ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ರಾಜ್ಯದ ಏಳಿಗೆಗಾಗಿ ಹಲವಾರು ಯೋಜನೆಗಳು ರೂಪಿತವಾದವು.

ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿದರು. ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು. ಹಳ್ಳಿಗಳಿಗೆ ವಿದ್ಯುತ್, ನೀರಾವರಿ ಸೌಲಭ್ಯಗಳನ್ನು ಒದಗಿಸಿದರು.ರಾಜ್ಯದಲ್ಲಿ ಹೊಸ ಕೈಗಾರಿಕೆಗಳು ಸ್ಥಾಪಿತವಾಗಿ ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಡಲಾಯಿತು. ಕ್ರಮೇಣ ಕಾಂಗ್ರೆಸ್ ಪಕ್ಷದ ಬಲ ಕುಗ್ಗುತ್ತಿದೆ ಎಂಬುದನ್ನು ಅರಿತ ಕಾಮರಾಜರು ಪದವಿಗಿಂತ ಪಕ್ಷ ಪ್ರಧಾನವೆಂದು ಸೂಚಿಸಿದರು. ಕಾಂಗ್ರೆಸ್ ಪಕ್ಷದ ಎಲ್ಲಾ ಧುರೀಣರು ತಮ್ಮ ತಮ್ಮ ಪದವಿಗಳಿಗೆ ತ್ಯಾಗ ಪತ್ರ ನೀಡಿ ಪಕ್ಷದ ಬಲವರ್ಧನೆಯ ಕೆಲಸದಲ್ಲಿ ತೊಡಗಬೇಕೆಂದು ಹೇಳಿದರು. ಇದು ಕಾಮರಾಜ್ ಸೂತ್ರ ವೆಂದೇ ಪ್ರಸಿದ್ಧವಾಯಿತು.

ಕೇಂದ್ರ ಮತ್ತು ರಾಜ್ಯಗಳ ಮಂತ್ರಿಗಳು ತಮ್ಮ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು, ಲಾಲ್ ಬಹದ್ದೂರ್ ಶಾಸ್ತ್ರಿ, ಜಗಜೀವನ್ ರಾಮ್, ಮುರಾರ್ಜಿ ದೇಸಾಯಿ, ಎಸ್ ಕೆ ಪಾಟೀಲ್ ಮೊದಲಾದವರು.

1964 ರಲ್ಲಿ ಕಾಮರಾಜ್ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಪಕ್ಷವನ್ನು ಎಲ್ಲಾ ರೀತಿಯಲ್ಲಿ ಬಲಗೊಳಿಸಿದರು. ನೆಹರುರವರು ನಿಧನದ ನಂತರ ತಲೆದೋರಿದ ಕಠಿಣ ಪರಿಸ್ಥಿತಿ, ರಾಜಕೀಯ ಬಿಕ್ಕಟ್ಟುಗಳನ್ನು ಅತ್ಯಂತ ಸಮರ್ಥವಾಗಿ ಎದುರಿಸಿ ಪರಿಹಾರಗಳನ್ನು ಒದಗಿಸಿದರು. ಕಾಮ ರಾಜುರವರು 1975 ಅಕ್ಟೋಬರ್ 2 ರಂದು ತೀರಿಕೊಂಡರು. ಆಗ ಅವರಿಗೆ ಕೇವಲ 72 ವರ್ಷ ವಯಸ್ಸಾಗಿತ್ತು. 1976 ಜನವರಿ 17 ರಂದು ಭಾರತ ಸರ್ಕಾರ ಮರಣೋತ್ತರವಾಗಿ ಕೆ ಕಾಮರಾಜ್ ಅವರಿಗೆ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಭಾರತದ ರಾಜಕೀಯ ಕ್ಷೇತ್ರದಲ್ಲಿ ಕೆ ಕಾಮರಾಜ್ ಅವರು ಪ್ರಮುಖ ಪಾತ್ರದಾರಿಗಳಾಗಿ ಪ್ರಾಮಾಣಿಕತೆ, ಪರಿಶುದ್ಧತೆ,ಸರಳತೆ ಇವುಗಳಿಂದಾಗಿ ಅವರು ಜನಪ್ರಿಯ ನಾಯಕರು ಎನಿಸಿದ್ದರು. ನಾಡಿನ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ನೆಹರು ಅವರ ನಿಕಟವರ್ತಿಗಳಾಗಿದ್ದರು. ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಇಂದಿರಾ ಗಾಂಧಿಯವರನ್ನು ಪ್ರಧಾನಮಂತ್ರಿಗಳನ್ನಾಗಿ ಮಾಡುವಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. ಇವರನ್ನು ದಕ್ಷಿಣ ಭಾರತದ ಗಾಂಧಿ ಎಂದೇ ಕರೆಯಲಾಗುತ್ತಿತ್ತು. ಇಂಥ ಸಮರ್ಥ ಪ್ರಾಮಾಣಿಕ ರಾಜಕಾರಣಿರವರ 121 ನೇ ವರ್ಷದ ಜನ್ಮ ಜಯಂತಿಯ ದಿನವಾದ ಇಂದು ಸ್ಮರಿಸಿ- ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

---

# ಕಾಡಾನೆ ದಾಳಿ: ಅರಣ್ಯ ವಾಚರ್ ಸಾವು

• ಉದಯವಾಹಿನಿ, ಆನೇಕಲ್



ತಾಲ್ಲೂಕಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಹಕ್ಕಿಪಿಕ್ಕಿ ಕಾಲೋನಿಯ ದೊಡ್ಡಬಂಡೆ ಬಳಿ ಬೆಳಗಿನ ಜಾವ ಕಾಡಾನೆ ದಾಳಿಯಿಂದಾಗಿ ಅರಣ್ಯ ವಾಚರ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.ಮೃತಪಟ್ಟ ಅರಣ್ಯ ಇಲಾಖೆಯ ವಾಚರ್ ನನ್ನು ಚಿಕ್ಕಮಾದಯ್ಯ (54) ಎಂದು ಗುರುತಿಸಲಾಗಿದೆ.

ಚಿಕ್ಕಮಾದಯ್ಯ ಸುಮಾರು 20 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಹೊರಗುತ್ತಿಗೆಯಲ್ಲಿ ವಾಚರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅರಣ್ಯದ ಬೀಟ್‌ಗಾಗಿ ತಂಡದೊಂದಿಗೆ ತೆರಳಿ ಗುರುವಾರ ರಾತ್ರಿ ಪಹರೆ ನಡೆಸುತ್ತಿದ್ದರು.

ಬೆಳಗಿನ ಜಾವ ದೊಡ್ಡಬಂಡೆಯಿಂದ ಪಕ್ಕಕ್ಕೆ ಹೋಗಿದ್ದ ಸಂದರ್ಭದಲ್ಲಿ ಕಾಡಾನೆಯೊಂದು ದಾಳಿ ನಡೆಸಿದ್ದರಿಂದ ಚಿಕ್ಕಮಾದಯ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಿಕ್ಕಮಾದಯ್ಯ ಅನುಭವಿ ವಾಚರ್ ಆಗಿದ್ದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಆನೆಗಳ ಕಾರ್ಯಾಚರಣೆ, ಹುಲಿ ಕಾರ್ಯಾಚರಣೆ, ಕಾಡ್ಗಿಚ್ಚು ಸೇರಿ ದಂತೆ ಎಲ್ಲಾ ಕೆಲಸಗಳಲ್ಲಿಯೂ ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿಕ್ಕಮಾದಯ್ಯ ಅವರು ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆ ಕುಟುಂಬದ ರೋಧನ ಮುಗಿಲು ಮುಟ್ಟಿತ್ತು.

ಮನೆಯ ದುಡಿಯುವವರು ಮಡಿದಿದ್ದರಿಂದ ಕುಟುಂಬದವರ ನೋವು ಮಡುಗಟ್ಟಿತ್ತು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಕೊಂಡೊಯ್ಯಲಾಯಿತು.ಅರಣ್ಯ ರಕ್ಷಕ ಚಿಕ್ಕಮಾದಯ್ಯ ಕಾಡಾನೆ ದಾಳಿಯಿಂದ ಮೃತಪಟ್ಟ ಹಿನ್ನೆಲೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಮೃತರ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡುವ ಭರವಸೆ ನೀಡಿದರು.

# ರೈಲು ನಿಲ್ದಾಣದಲ್ಲಿ ಬಾಲಕಿ ಶವ ಪತ್ತೆ

• ಉದಯವಾಹಿನಿ, ಬೆಂಗಳೂರು

ಮೆಜೆಸ್ಟಿಕ್ ರೈಲು ನಿಲ್ದಾಣದಲ್ಲಿ ಬಾಲಕಿ ಮೃತದೇಹ ಪತ್ತೆ ಪ್ರಕರಣದಲ್ಲಿ ಬಾಲಕಿಯ ಗುರುತನ್ನು ರೈಲ್ವೆ ಪೊಲೀಸರು ಪತ್ತೆ ಹಚ್ಚಿದ್ದಾರೆ. ಜುಲೈ 3 ರಂದು ರೈಲು ನಿಲ್ದಾಣದ ಟ್ಯಾಕ್ಸಿ ಪಾರ್ಕಿಂಗ್ ಸ್ಥಳದಲ್ಲಿ ಶವವಾಗಿ ಪತ್ತೆಯಾಗಿದ್ದ ಬಾಲಕಿಯ ಹೆಸರು ಮರಿಯಮ್ (5) ಕೊಲೆಯಾದವಳು ಎಂದು ತಿಳಿದುಬಂದಿದೆ. ಮತ್ತೊಂದೆಡೆ ಬಾಲಕಿಯ ಕೊಲೆಯ ಸುತ್ತ ಸಾಕಷ್ಟು ಅನುಮಾನಗಳು ವ್ಯಕ್ತವಾಗಿದ್ದು, ಸದ್ಯ ಬಾಲಕಿಯ ಪೋಷಕರು ಯಾರು ಎಂಬುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಕೊಲೆಯಾದ ಮರಿಯಮ್ ತಾಯಿ ಹೀನಾ, ರಾಜು ಎಂಬಾತನ ಜತೆ ಅನೈತಿಕ ಸಂಬಂಧ ಹೊಂದಿದ್ದಳು ಎನ್ನಲಾಗಿದೆ.

ಗಂಡ ಶಿವು ಎಂಬಾತನನ್ನು ಬಿಟ್ಟು ರಾಜು ಜತೆ ಹೀನಾ ಭಿಕ್ಷಾಟನೆ ಮಾಡುತ್ತಿದ್ದಳು. ಇವರಿಬ್ಬರ ಜೊತೆಯೇ ಕೊಲೆಯಾದ ಮರಿಯಮ್ ಇರುತ್ತಿದ್ದಳು. ಮಗಳು ತನ್ನ ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿದ್ದಾಳೆ ಎಂದು ಹೀನಾ, ಪ್ರೇಮಿಯ ಜತೆ ಸೇರಿ ಕೊಲೆಗೈದಿರುವ ಶಂಕೆ ವ್ಯಕ್ತವಾಗಿದೆ. ಮರಿಯಮ್ ಮೃತದೇಹ ದೊರೆತ ದಿನದಿಂದಲೂ ಹೀನಾ, ರಾಜು ನಾಪತ್ತೆಯಾಗಿದ್ದಾರೆ.

---

# ಮಂತ್ರಾಲಯ ಶ್ರೀಗಳಿಂದ ತಪ್ತ ಮುದ್ರಾ ಧಾರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಆಷಾಢ ಶುದ್ಧ ಪ್ರಥಮ ಏಕಾದಶಿ ಪ್ರಯುಕ್ತ 17-7-2024 ಬುಧವಾರದಂದು ಜಗದ್ಗುರು ಶ್ರೀಮನ್ ಮಧ್ವಾಚಾರ್ಯಮೂಲ ಮಹಾಸಂಸ್ಥಾನದೀಶ್ವರರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪ್ರಸ್ತುತ ಪೀಠಾಧಿಪತಿ ಗಳಾದ ಪರಮ ಪೂಜ್ಯ 1008 ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಶ್ರೀಮನ್ ಮೂಲ ರಾಮಚಂದ್ರದೇವರ ಸಂಸ್ಥಾನ ಪೂಜೆಯನ್ನು ನೆರವೇರಿಸಿ, ಶ್ರೀ ಸುದರ್ಶನ ಹೋಮದೊಂದಿಗೆ ತಾವು ತಪ್ತ ಮುದ್ರ ಧಾರಣೆಯನ್ನು ಸ್ವೀಕರಿಸಿ ತದನಂತರ ಶ್ರೀಮಠದ ಶಿಷ್ಯರಿಗೆ ಬೆಳಗ್ಗೆ 7:30 ರಿಂದ ರಾತ್ರಿ 9:30 ವರೆಗೆ ನಿರಂತರವಾಗಿ ತಪ್ತ ಮುದ್ರ ಧಾರಣೆಯನ್ನು ಮಾಡಲಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಮಠದ ಪಂಡಿತರಿಂದ ಉಪನ್ಯಾಸ ಮಾಲಿಕೆಯು ನೆರವೇರಲಿದೆ, ಎಂದು ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದಿಂದ್ರ ಆಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

# ನೌಕರರ ಎರಡು ಪ್ರಮುಖ ಬೇಡಿಕೆ ಸಂಪುಟದಲ್ಲಿ ಚರ್ಚೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರಿ ನೌಕರರ ಎರಡು ಪ್ರಮುಖ ಬೇಡಿಕೆಗಳ ಬಗ್ಗೆ ಚರ್ಚಿಸಲು ವೇದಿಕೆ ಸಜ್ಜಾಗಿದೆ. ಏಳನೇ ವೇತನ ಆಯೋಗದ ವರದಿ ಅನುಷ್ಠಾನ ವಿಷಯ ಅಜೆಂಡಾದಲ್ಲಿ ಸೇರ್ಪಡೆಯಾಗಿದ್ದರೆ, ಎನ್‌ಪಿಎಸ್ ರದ್ದಿಗೆ ಸಂಬಂಧಿಸಿದಂತೆ ಸಂಪುಟದ ಮುಂದೆ ಕಡತ ಮಂಡಿಸಲು ಸಿಎಂ ಸಿದ್ದರಾಮಯ್ಯ ಹಣಕಾಸು ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸೋಮವಾರ ಸಂಜೆ ನಡೆಯುವ ಸಚಿವ ಸಂಪುಟ ಸಭೆಯ ಮುಖ್ಯ ಕಾರ್ಯಸೂಚಿಯಲ್ಲಿ 20 ವಿಷಯಗಳಿದ್ದು, ಅವುಗಳಲ್ಲಿ ಏಳನೇ ವೇತನ ಆಯೋಗದ ಶಿಫಾರಸುಗಳ ಅನುಷ್ಠಾನ ಸಹ ಸೇರ್ಪಡೆಯಾಗಿದೆ. ವೇತನ ಹೆಚ್ಚಳವನ್ನು ಆಗಸ್ಟ್ ಒಂದರಿಂದ ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ. ಅದಕ್ಕೆ ಅಗತ್ಯವಾದ ಹಣಕಾಸನ್ನೂ ಆಯವ್ಯಯದಲ್ಲಿ ತೆಗೆದಿರಿಸಿದೆ. ವೇತನ ಆಯೋಗದ ಶಿಫಾರಸು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಿಂದಿನ ಸಂಪುಟ ಸಭೆಯಲ್ಲಿ ಸಿಎಂಗೆ ಅಧಿಕಾರ ನೀಡಲಾಗಿತ್ತು. ಮತ್ತೆ ಸಂಪುಟದ ಮುಂದೆ ವಿಷಯ ತರುವ ಅಗತ್ಯವಿಲ್ಲ. ಆದರೂ ಸಂಪುಟ ಸದಸ್ಯರಿಗೆ ಮನವರಿಕೆ ಮಾಡಿಕೊಡುವ ಸಲುವಾಗಿ ಮಂಡಿಸಲಾಗುತ್ತಿದೆ.

ನೌಕರರ ಹಾಗೂ ನಿವೃತ್ತರ ವೇತನ ಹಾಗೂ ಭತ್ಯೆಗಳ ಪರಿಷ್ಕರಣೆಗೆ 17 ಸಾವಿರ ಕೋಟಿ ರೂ.ಗಳ ಅಗತ್ಯವಿದೆ. ವೇತನ ಆಯೋಗ ಶೇ.27.5 ವೇತನ ಪರಿಷ್ಕರಣೆಗೆ ಶಿಫಾರಸು ಮಾಡಿದೆ. ಅದರಲ್ಲಿ ಈಗಾಗಲೆ ಶೇ.17 ಮಧ್ಯಂತರ ಪರಿಹಾರ ನೀಡಲಾಗಿದೆ. ಉಳಿದ ಶೇ.10.5 ನೀಡಬೇಕಾಗಿದೆ. ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಸರ್ಕಾರ ಬಜೆಟ್‌ನಲ್ಲಿ 14 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಈ ಹಣಕಾಸು ವರ್ಷದಲ್ಲಿ ಈಗಾಗಲೇ 4 ತಿಂಗಳು ಮುಗಿದಿರುವುದರಿಂದ 14 ಸಾವಿರ ಕೋಟಿ ರೂ.ಗಳು ಸಾಕಾಗುತ್ತವೆ ಎಂದು ಹೇಳಲಾಗುತ್ತಿದೆ. ವೇತನ ಪರಿಷ್ಕರಣೆ ಮಾತ್ರವೇ ಅಥವಾ ಯಾವ ಯಾವ ಭತ್ಯೆ ಪರಿಷ್ಕರಣೆ ಆಗಲಿವೆ ಎಂಬುದು ಸಂಪುಟ ಸಭೆಯ ನಂತರವೇ ತಿಳಿಯಲಿದೆ.

**ಹೈಬ್ರಿಡ್ ಅಥವಾ ಒಪಿಎಸ್:** ಎನ್‌ಪಿಎಸ್ ರದ್ದಾದರೂ ಆಂಧ್ರಪ್ರದೇಶ ತರಲು ಮುಂದಾಗಿದ್ದ ಹೈಬ್ರಿಡ್ ವ್ಯವಸ್ಥೆ ತರುತ್ತಾರೆ ಎಂಬ ಚರ್ಚೆ ನೌಕರರ ನಡುವೆ ನಡೆದಿದೆ. ಪಿ ಎಫ್‌ಆರ್‌ಡಿಎ ಪ್ರಕಾರ ಎನ್‌ಪಿಎಸ್, ಒಪಿಎಸ್ ಹೊರತು ಬೇರೆ ವ್ಯವಸ್ಥೆ ತರಲು ಸಾಧ್ಯವಿಲ್ಲ. ಹೈಬ್ರಿಡ್ ಎಂದರೆ ಕನಿಷ್ಠ ಪಿಂಚಣಿ ಗ್ಯಾರಂಟಿ ನೀಡುವುದು, ಅದಕ್ಕೆ 33 ವರ್ಷ ಸೇವೆ ಕಡ್ಡಾಯ ಎಂಬುದಾಗಿದೆ. ಆದರೆ ಅಂತಹ ಯಾವುದೇ ವ್ಯವಸ್ಥೆ ತರಲು ಸರ್ಕಾರದಲ್ಲಿ ಚರ್ಚೆ ನಡೆದಿಲ್ಲ. ಆಂಧ್ರಪ್ರದೇಶದಲ್ಲಿ ಈಗ ಹೈಬ್ರಿಡ್ ವ್ಯವಸ್ಥೆ ಬಗ್ಗೆ ಚರ್ಚೆ ಕೈಬಿಡಲಾಗಿದೆ.

**21 ಸಾವಿರ ಕೋಟಿ ಲಭ್ಯ :** ಸರ್ಕಾರ ತನ್ನ ನೌಕರರಿಗೆ 33 ವರ್ಷ ವಂತಿಕೆ ಪಾವತಿಸುತ್ತದೆ. ನಿವೃತ್ತಿ ನಂತರ ನೌಕರರ ಜೀವಿತಾವಧಿ ಸರಾಸರಿ 15 ವರ್ಷ ಆಗಿರುತ್ತದೆ. ಸರ್ಕಾರಕ್ಕೆ ಇದೊಂದು ರೀತಿಯ ಹೊರೆಯಾಗಿರುತ್ತದೆ. ಇದೇ ಆಧಾರದಲ್ಲಿಯೇ ಛತ್ತೀಸ್‌ಘಡ ರದ್ದು ಮಾಡಿದೆ. ಈಗ ಸರ್ಕಾರದ ವಂತಿಕೆ 12 ಸಾವಿರ ಕೋಟಿ ರೂ.ಗಳು ಹಾಗೂ ನೌಕರರ ಬಾಬ್ತು 9 ಸಾವಿರ ಕೋಟಿ ರೂ.ಗಳು ಇದೆ. ಎನ್‌ಪಿಎಸ್ ರದ್ದು ಮಾಡಿ ವಾಪಾಸ್ ಪಡೆದರೆ 21 ಸಾವಿರ ಕೋಟಿ ರೂ.ಗಳು ಲಭ್ಯವಾಗಲಿದೆ. ಎನ್‌ಪಿಎಸ್ ತಕ್ಷಣ ರದ್ದು ಮಾಡಿದರೂ ನೌಕರರ ನಿವೃತ್ತಿಯ ಕೊನೆಯಲ್ಲಿ ಸರ್ಕಾರದ ಮೇಲೆ ಹೊರೆಯಾಗುತ್ತದೆ ಎಂಬ ಅಭಿಪ್ರಾಯ ಇದೆ.



### ಎನ್‌ಪಿಎಸ್ ಕಡತ ಮಂಡನೆಗೆ ಸೂಚನೆ:

**ಎನ್‌ಪಿಎಸ್ ನೌಕರರ ಸಂಘ ಸರ್ಕಾರದ ಮೇಲೆ ನಿರಂತರ ಒತ್ತಡ ತಂದ ಪ್ರಯತ್ನದ ಫಲವಾಗಿ ಈ ಬಗ್ಗೆ ಸಂಪುಟದ ಮುಂದೆ ಎನ್‌ಪಿಎಸ್ ರದ್ದು ಕಡತ ಮಂಡಿಸುವಂತೆ ಹಣಕಾಸು ಇಲಾಖೆ ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. 2.78 ಲಕ್ಷ ಎನ್‌ಪಿಎಸ್ ನೌಕರರಿದ್ದು, ಯೋಜನೆ ರದ್ದು ಮಾಡುವುದರಿಂದ ಸರ್ಕಾರಕ್ಕೆ ಯಾವುದೇ ಹೊರೆ ಇಲ್ಲ, ಅದರ ಬದಲಾಗಿ ಉಳಿತಾಯವಾಗಲಿದೆ ಎಂಬ ಅಂಶವನ್ನು ಸಂಘದ ಅಧ್ಯಕ್ಷ ಶಾಂತರಾಮ, ಪದಾಧಿಕಾರಿಗಳು ಸಿಎಂಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದರೆ ಪಿಎಫ್‌ಆರ್‌ಡಿಎಯಲ್ಲಿ ಸದಸ್ಯರಾಗಿರುವ ರಾಜ್ಯದ ಹಣಕಾಸು ಇಲಾಖೆಯ ಕಾರ್ಯದರ್ಶಿಯೊಬ್ಬರು ಮಾತ್ರ ಎನ್‌ಪಿಎಸ್ ರದ್ದು ಬೇಡವೆಂದು ಅಪಸ್ವರ ತೆಗೆದಿದ್ದಾರೆ ಎನ್ನಲಾಗಿದೆ.**

---



ವಿಶ್ವಾಸ್ . ಡಿ.ಗೌಡ
• ಉದಯವಾಹಿನಿ ವಿಶೇಷ

# ನುಗ್ಗೆ ಬೆಳೆಯಲು ನುಗ್ಗಿ



ಉದಯವಾಹಿನಿ ಚಿತ್ರ

ಬಾಳೆ ಹಣ್ಣಿಗಿಂತ 15 ಪಟ್ಟು ಪೊಟಾಸಿಯಂ, ಹಾಲಿಗಿಂತ 15 ಪಟ್ಟು ಕ್ಯಾಲ್ಸಿಯಂ, ಗೋಧಿ ಹುಲ್ಲಿಗಿಂತ 4 ಪಟ್ಟು ಕ್ಲೋರೊಫಿಲ್ , ಕಿತ್ತಳೆ ಹಣ್ಣಿನಷ್ಟೇ ವಿಟಮಿನ್ ಸಿ, ಕೋಳಿಮೊಟ್ಟೆಗಿಂತ 36 ಪಟ್ಟು ಮೆಗ್ನೀಷಿಯಂ , ಬಾದಾಮಿಗಿಂತ 12 ಪಟ್ಟು ವಿಟಮಿನ್ ಇ , ಕ್ಯಾರಟ್ಟಿಗಿಂತ 10 ಪಟ್ಟು ವಿಟಮಿನ್ ಎ, ಬೆಣ್ಣೆ, ತುಪ್ಪಕ್ಕಿಂತ 9 ಪಟ್ಟು ಪ್ರೊಟೀನ್ , ಪಲಾಕ್ ಸೊಪ್ಪಿಗಿಂತ 25 ಪಟ್ಟು ಹೆಚ್ಚು ಕಬ್ಬಿಣ, ಒಮೇಗ 3 , 6 ,9 ಪೋಷಕಾಂಶಗಳನ್ನ ಹೊಂದಿರುವ ನುಗ್ಗೆ ಸೊಪ್ಪು ಸಹಜವಾಗಿಯೇ ಮನುಷ್ಯರ ಶರೀರದ ಪ್ರತಿರೋಧ ಕಟ್ಟಬಲ್ಲದು.

ನುಗ್ಗೆಯನ್ನ ಅಮೇರಿಕನ್ನರು ಕುದುರೆ ಮೂಲಂಗಿ ಎಂದು ಕರೆಯುತ್ತಾರೆ ಯಾಕೆಂದರೆ ನುಗ್ಗೆ ಮರದ ತಾಯಿ ಬೇರು ಮೂಲಂಗಿಗಿಂತ 10 ಪಟ್ಟು ದೊಡ್ಡದಾಗಿರುತ್ತದೆ. ಮಳೆಗಾಲದಲ್ಲಿ ಸಿಗುವ ಹೆಚ್ಚು ನೀರನ್ನ ತನ್ನ ಮೂಲಂಗಿಯಂಥ ಬೇರಿನಲ್ಲಿ ಕಾದಿಟ್ಟುಕೊಳ್ಳುವ ನುಗ್ಗೆ ಮರ ಜನವರಿ ಮತ್ತು ಫೆಬ್ರುವರಿ ತಿಂಗಳ ಬಿರುಸಾದ ಬೇಗೆಯಲ್ಲೂ ಬೆಳಕಿನ ಗೊಂಚಲಿನಂಥ ಹೂ ಬಿಡಲು ಬಳಸಿಕೊಳ್ಳುತ್ತದೆ. ಅಮೇರಿಕ ಮತ್ತು ಅದರ ಇತರೆ ದುಷ್ಟ ಸಹಚರ ದೇಶಗಳು ದಕ್ಷಿಣ ಅಮೇರಿಕದ ಪುಟ್ಟ ದ್ವೀಪದೇಶ ಕ್ಯೂಬಾದ ವಿರುದ್ಧ ಆರ್ಥಿಕ ದಿಗ್ಬಂಧನ ವಿಧಿಸಿದಾಗ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೊ ಅವರು ಕರ್ನಾಟಕದ ರೈತನಾಯಕ ಪ್ರೊ. ಎಂ.ಡಿ. ನಂಜುಂಡ ಸ್ವಾಮಿಯವರ ಸಹಕಾರ ಪಡೆದು ಭಾರತ, ಶ್ರೀಲಂಕದಿಂದ 2 ಟನ್ ನುಗ್ಗೆ ಬೀಜ ತರಿಸಿಕೊಂಡು , ಮೊದಲು ತಾವೇ ಖುದ್ದಾಗಿ ತಮ್ಮ ಹಿತ್ತಲಿನಲ್ಲಿ ಬೆಳೆಯುತ್ತ, ಕ್ಯೂಬಾ ದೇಶದಾದ್ಯಂತ ಪರಿಚಯಿಸುತ್ತ ಹೋದದ್ದು ಕ್ಯೂಬನ್ನರು ಆರ್ಥಿಕ ದಿಗ್ಬಂಧನದ ನಡುವೆಯೂ ಉತ್ತಮ ಪೋಷಕಾಂಶಗಳನ್ನ ಉಣಲು ಸಾಧ್ಯವಾಯಿತು.

## ನುಗ್ಗೆ ಬೇಸಾಯ ವಿಧಾನ

- **ನುಗ್ಗೆ ಸೂರ್ಯನ ಬಿಸಿಲನ್ನ ಬಯಸುವ ಸಸ್ಯ**
- **ನುಗ್ಗೆ ಬೇಸಾಯಕ್ಕೆ ಹೆಚ್ಚು ನೀರಿನ ಅಗತ್ಯವಿಲ್ಲ**
- **ಗೆಲ್ಲು(ಕಾಂಡ) ನೆಟ್ಟು ಅಥವಾ ಬೀಜದಿಂದ ಸಸಿ ತಯಾರಿಸಿ ಬೆಳೆಸಬಹುದು.**

**ಗೆಲ್ಲು ನೆಟ್ಟರೆ ಗಾಳಿಗೆ ಮುರುಟಿ ಬೀಳುವ ತೊಡಕು ಇರುವುದರಿಂದ ಬೀಜದಿಂದ ಸಸಿ ತಯಾರಿಸಿ ಬೆಳೆಸುವುದೇ ಸೂಕ್ತ**

- **ತೋಟಗಾರಿಕೆ ಬೆಳೆಗಳ ನಡುವೆ ಅಂತರ ಬೆಳೆಯಾಗಿಯೂ ಬೆಳೆಯಬಹುದು.**

## ಬೀಜದಿಂದ ನುಗ್ಗೆ ಬೆಳೆ ವಿಧಾನ

★ 8 X 4 ಅಳತೆಯ ನರ್ಸರಿ ಕವರಿಗೆ ಫಲವತ್ತಾದ ಮಣ್ಣು ತುಂಬಿ ಬೀಜವನ್ನ ಮಣ್ಣಿನೊಳಗೆ ಒಂದು ಅಂಗುಲ ಆಳಕ್ಕೆ ಬಿತ್ತಿ , ಅದು ಹುಟ್ಟುವ ತನಕ ಬೀಜ ಕೊಳೆಯದಂತೆ ಮಿತವಾಗಿ ನೀರು ಸಿಂಪಡಿಸುತ್ತಿರಿ ; ಬೀಜ 7 ರಿಂದ 9 ದಿನಗಳಲ್ಲಿ ಹುಟ್ಟಿದವನದಂತೆ ವೇಗವಾಗಿ ಬೆಳೆದು 30 - 40 ದಿನಗಳಲ್ಲಿ ಸಸಿ ತಯಾರಾಗುತ್ತವೆ.

45 ಸೆಂಟಿಮೀಟರು ಆಳದ ಗುಂಡಿ ತೆಗೆಯಿರಿ, ಮಣ್ಣಿನ ಗುಣ ನೋಡಿಕೊಂಡು ಕೊಟ್ಟಿಗೆ ಗೊಬ್ಬರ , ಕೆರೆಯ ಕಪ್ಪು ಗೋಡು ಮತ್ತು ತರಗೆಲೆಗಳನ್ನ ಮಿಶ್ರ ಮಾಡಿ ತಯಾರಿಸಿದ ಕಾಂಪೋಸ್ಟ್ ಗೊಬ್ಬರವನ್ನ ಗುಂಡಿ ತೋಡಿದ ಮೇಲಿನ ಪದರದ ತಾಯಿಮಣ್ಣಿನ ಜೊತೆ ಬೆರೆಸಿ ಪಾತಿ ಸಿದ್ಧಪಡಿಸಿ ನೆಡಿ. ನೆಟ್ಟ 15 ದಿನಗಳ ನಂತರ ಹೊಂಗೆ ಹಿಂಡಿ, ಬೇವಿನ ಹಿಂಡಿಯನ್ನ ಸಮಪ್ರಮಾಣದಲ್ಲಿ ಬೆರೆಸಿ ನುಗ್ಗೆಯ ಪಾತಿಗೆ ಉದುರಿಸಿ ಕಳೆಗತ್ತಿಯಿಂದ ಕೆದಕಿ , ತೆಳ್ಳಗೆ ನೀರು ಸಿಂಪಡಿಸಿ.

★ ನುಗ್ಗೆ ಸಾಲಿನ ನಡುವೆ ಅಲ್ಲಲ್ಲಿ ಹರಳು ಬಿತ್ತಿ , ಬೆಳೆದ ಹರಳಿನ ಗಿಡಗಳನ್ನ ಕತ್ತರಿಸಿ ನುಗ್ಗೆ ಪಾತಿಗೆ ಹೊದಿಸಿ.

★ ಏಕಬೆಳೆ ವಿಧಾನದಲ್ಲಿ ಬೆಳೆಯುವುದು ಅಷ್ಟು ಸೂಕ್ತವಲ್ಲ , ಅದ್ದರಿಂದ ನುಗ್ಗೆಯ ಸಾಲುಗಳ ನಡುವೆ ಅನುಕೂಲಕ್ಕೆ ತಕ್ಕಂತೆ 12 ರಿಂದ 15 ಅಡಿ ಅಂತರ ಕೊಟ್ಟು ನಡುವೆ ಮಳೆ ಆಶ್ರಿತ ಅಥವಾ ನೀರಾವರಿ ಆಶ್ರಿತ ಬೆಳೆಗಳನ್ನ ಬೆಳೆದುಕೊಳ್ಳಬಹುದು.

★ ನುಗ್ಗೆ ಗಿಡ 4 - 5 ಅಡಿ ಎತ್ತರಕ್ಕೆ ಬೆಳೆದ ನಂತರ ಪಾತಿಯಿಂದ 2 ಅಡಿ ಎತ್ತರದಲ್ಲಿ ತೋಟಗಾರಿಕೆ ಕತ್ತರಿ ಬಳಸಿ , ಬಿದ್ದ ಮಳೆನೀರು ಕತ್ತರಿಸಿದ ಭಾಗದಲ್ಲಿ ತಂಗಿ ಕಾಂಡ ಕೊಳೆಯದಂತೆ ವಾರೆಯಾಗಿ ಕತ್ತರಿಸಿ

**ನುಗ್ಗೆ ಬೀಜ ಆಯ್ಕೆ :** ★ ಭಾಗ್ಯ , ಪಿ.ಕೆ. ಎಮ್ 1, ನಾಟಿನುಗ್ಗೆ ಈ ಯಾವುದನ್ನಾದರೂ ನಿಮ್ಮ ವಿವೇಚನೆಗೆ ಅನುಸಾರ ಆಯ್ಕೆ ಮಾಡಿ.

★ ಕೆಲವು ಬೀಜದ ಅಂಗಡಿಗಳು ಪಿ.ಕೆ.ಎಂ 2 ತಳಿ ಕೊಡುತ್ತೇವೆ ಅಂತಾ ಹೇಳುತ್ತಿದ್ದಾರೆ. ಆದರೆ ಪಿ.ಕೆ.ಎಂ 2 ತಳಿಯ ಬಗ್ಗೆ ಸಂಶೋಧನೆ ನಡೆಸುತ್ತಿರುವ ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯ ಅಧಿಕೃತವಾಗಿ ಈ ಬೀಜವನ್ನ ಬಿಡುಗಡೆ ಮಾಡಿರುವುದು ಇನ್ನೂ ಖಚಿತವಾಗಿಲ್ಲ.

★ ನುಗ್ಗೆ ನೆಟ್ಟ 10 ತಿಂಗಳಲ್ಲಿ ಹೂ ಬಿಟ್ಟು ಶ್ರಾವಣ ಮಾಸದ ತನಕ ಕಾಯಿ ಬಿಡುತ್ತದೆ , ಆದ್ದರಿಂದ ನುಗ್ಗೆಯನ್ನ ಮೇ - ಆಗಸ್ಟ್ ತಿಂಗಳಲ್ಲೇ ನೆಡುವುದು ಸೂಕ್ತ

★ ನುಗ್ಗೆ ಕಾಯಿ ಪೂರ್ತಿ ಕೊಯ್ಲಾದ ನಂತರ ರೆಂಬೆಗಳ ತುದಿ ಸವರಿ ಪೊದೆಯಾಗುವಂತೆ ನಿಗಾವಹಿಸಿ , ರೆಂಬೆ ಸವರುವ ಕೆಲಸ ಆಗಸ್ಟ್ ತಿಂಗಳ ಒಳಗೆ ಮುಗಿದಿರಬೇಕು. ಆಗಸ್ಟ್ ನಂತರ ಸವರಿದರೆ ಕಾಂಡ ಕೊಳೆಯುವ ಅಪಾಯವಿದೆ.

★ ನುಗ್ಗೆ ಬೆಳೆಸಿದರೆ ಬದುಕೆಲ್ಲ ನುಗ್ಗು ನುಗ್ಗಾಗುತ್ತದೆ ಎಂದಿರುವ ಮೂಡತನವನ್ನ ನಂಬಬೇಡಿ


★ ನುಗ್ಗೆಯನ್ನ ಮುರಿದು ಬೆಳೆಸು , ಮಕ್ಕಳನ್ನ ಹೊಡೆದು ಬೆಳೆಸು ಎಂಬ ಮತ್ತೊಂದು ನಂಬಿಕೆಯಿದೆ . ಅದರೆ ನುಗ್ಗೆಯನ್ನ ಮುರಿಯದೇ ತೋಟಗಾರಿಕೆ ಕತ್ತರಿ ಬಳಸಿ , ಕಾಂಡ ಸಿಗಿಯದಂತೆ ಕತ್ತರಿಸಿ ಬೆಳೆಸಿ. ಮಕ್ಕಳನ್ನ ಹೊಡೆದು ಬೆಳೆಸಿ ಎಂಬುದು ಮಕ್ಕಳ ಕ್ರಿಯಾಶೀಲತೆ ಬಗ್ಗೆ ಅರಿವಿಲ್ಲದವರು ಹೇಳಿರುವ ಮಾತು , ಮಕ್ಕಳನ್ನ ಯಾವುದೇ ಕಾರಣಕ್ಕೂ ದಂಡಿಸದೇ ಮನ ಒಲಿಕೆಯ ಭಾಷಾ ಸಂವಹನದ ಮೂಲಕವೇ ಬೆಳೆಸಿ.

## ನುಗ್ಗೆ ಮರದ ಇತರೆ ಉಪಯೋಗಗಳು

**1. ಸವರಿದ ನುಗ್ಗೆಯ ಕಾಂಡವನ್ನ ತುಂಡು ತುಂಡಾಗಿ ಕೊಚ್ಚಿ , ನುಗ್ಗೆ ಗಿಡದ ಪಾತಿಗೆ ಹೊದಿಕೆ ಮಾಡಿದರೆ ಪಾತಿಯ ಜೈವಿಕ ಅಹಾರ ವರ್ತುಲಕ್ಕೆ ಅಗತ್ಯವಾಗಿರುವ ' ಲಿಗ್ನೋಪ್ರೊಟೀನ್ ' ಸಿಕ್ಕಂತಾಗುತ್ತದೆ.**

**2.ನುಗ್ಗೆ ಬೀಜದ ಪುಡಿಯನ್ನ ಹೊಂಡು ನೀರು, ಮತ್ತು ಉಪ್ಪು ನೀರು ಶುದ್ಧಗೊಳಿಸಲು ಬಳಸಲಾಗುತ್ತಿದೆ**

**3. ನುಗ್ಗೆ ಬೀಜದಿಂದ ತಯಾರಿಸಲಾಗುವ ' ಬೆನ್ ಎಣ್ಣೆ ಅಡುಗೆಗೆ ಒದಗಿ ಬರುವ ಎಣ್ಣೆ**



7 ಆವೃತ್ತಿ ಕಳೆದರೂ ಐಪಿಎಲ್ ಟ್ರೋಫಿ ತಂದುಕೊಡುವಲ್ಲಿ ವಿಫಲರಾದ ರಿಕಿ ಪಾಟಿಂಗ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ಮುಖ್ಯ ಕೋಚ್ ಹುದ್ದೆಯಿಂದ ವಜಾಗೊಳಿಸಿದೆ. 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಆವೃತ್ತಿಯಿಂದ ಪಾಂಟಿಂಗ್ ಡೆಲ್ಲಿ ತಂಡದ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸುವುದಿಲ್ಲ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಿರ್ದೇಶಕ ಸೌರವ್ ಗಂಗೂಲಿ ಖಚಿತಪಡಿಸಿದ್ದಾರೆ.

# ಟ್ರೋಫಿ ತಂದುಕೊಡದಿದ್ದಕ್ಕೆ ತಲೆದಂಡ

ಆಸ್ಟ್ರೇಲಿಯಾ ತಂಡದ ಮಾಜಿ ನಾಯಕರೂ ಆಗಿರುವ ರಿಕಿ ಪಾಂಟಿಂಗ್ ಕಳೆದ 7 ಆವೃತ್ತಿಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ಮುಖ್ಯಕೋಚ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಡೆಲ್ಲಿ ಕ್ಯಾಪಿಟಲ್ಸ್ ಸೇರುವ ಮುನ್ನ ಪಾಂಟಿಂಗ್ ಮುಂಬೈ ಇಂಡಿಯನ್ಸ್ ತಂಡವನ್ನು ಮುನ್ನಡೆಸಿದ್ದರು. ಪಾಂಟಿಂಗ್ ನೇತೃತ್ವದಲ್ಲಿ 2020ರಲ್ಲಿ ಪಾಂಟಿಂಗ್ ಅವರ ಸಾರಥ್ಯದಲ್ಲೇ ಡೆಲ್ಲಿ ತಂಡ ಫೈನಲ್ ಪ್ರವೇಶಿಸಿತ್ತು. ಆದ್ರೆ ಮುಂಬೈ ಇಂಡಿಯನ್ಸ್ ವಿರುದ್ಧ ಸೋತು ಪ್ರಶಸ್ತಿ ಗೆಲ್ಲಲು ವಿಫಲವಾಯಿತು.

2024ರ ಆವೃತ್ತಿಯಲ್ಲಿ ಆರಂಭದಲ್ಲಿ ಸತತ ಮೂರು ಸೋಲು ಕಂಡಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಬಳಿಕ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿತ್ತು. 14 ಪಂದ್ಯಗಳಲ್ಲಿ 7ರಲ್ಲಿ ಗೆಲುವು ಸಾಧಿಸಿದರೂ ಪ್ಲೇ ಆಫ್‌ನಿಂದ ಹೊರಗುಳಿಯಿತು. ಇದೀಗ ತಂಡದ ಅದೃಷ್ಟ ಬದಲಾಯಿಸುವ ಪ್ರಯತ್ನದಲ್ಲಿ ನಿರಾಸೆ ಮೂಡಿಸಿದ ರಿಕಿ ಪಾಂಟಿಂಗ್ ಅವರನ್ನು ಮುಂದುವರಿಸರಿದಲು ಫ್ರಾಂಚೈಸಿ ನಿರ್ಧರಿಸಿದೆ. ಕ್ರಿಕೆಟ್ ನಿರ್ದೇಶಕ ಸೌರವ್ ಗಂಗೂಲಿ ಇದನ್ನು ದೃಢಪಡಿಸಿದ್ದಾರೆ. ಪಾಂಟಿಂಗ್ ಅವರನ್ನು ಮುಖ್ಯಕೋಚ್ ಹುದ್ದೆಯಿಂದ ವಜಾಗೊಳಿಸಿದ ಬೆನ್ನಲ್ಲೇ ಮುಖ್ಯಕೋಚ್ ಹುದ್ದೆಗೆ ಗಂಗೂಲಿ ಅವರ ಹೆಸರು ಕೇಳಿಬಂದಿದೆ. 2025ರ ಆವೃತ್ತಿಯಿಂದ ಗಂಗೂಲಿ ಅವರು ಡೆಲ್ಲಿ ತಂಡದ ಮುಖ್ಯಕೋಚ್ ಹುದ್ದೆ ಅಲಂಕರಿಸಲಿದ್ದಾರೆ.

# ಟೀಂ ಇಂಡಿಯಾಗೆ ಭರ್ಜರಿ ಗೆಲುವು


## ಅಗ್ನಿ ಪರೀಕ್ಷೆಯಲ್ಲಿ ಗೆದ್ದ, ಆಸ್ಟ್ರೇಲಿಯಾ ಹಿಂದಿಕ್ಕಿ ವಿಶೇಷ ದಾಖಲೆ

ಹರಾರೆಯಲ್ಲಿ ನಡೆದ ಭಾರತ ಮತ್ತು ಜಿಂಬಾಬ್ವೆ ನಡುವಿನ ಕೊನೆಯ 5ನೇ ಟಿ20 ನಲ್ಲಿ ಟೀಮ್ ಇಂಡಿಯಾ ಭರ್ಜರಿ ಜಯ ಗಳಿಸಿದೆ. ಆರಂಭದಲ್ಲಿ ವಿಕೆಟ್ ಕಳೆದುಕೊಂಡರೂ ಚೇತರಿಸಿಕೊಂಡು ಎದುರಾಳಿಗಳ ಮುಂದೆ ಕಠಿಣ ಗುರಿ ನೀಡಿತ್ತು. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 167 ರನ್ ಗಳಿಸಿತು. ಸಂಜು ಸ್ಯಾಮ್ಸನ್ (45 ಎಸೆತಗಳಲ್ಲಿ 58; 1 ಬೌಂಡರಿ, 4 ಸಿಕ್ಸರ್) ಅರ್ಧಶತಕ ಗಳಿಸಿದರು. ಶಿವಂ ದುಬೆ (12 ಎಸೆತಗಳಲ್ಲಿ 26; 2 ಬೌಂಡರಿ, 2 ಸಿಕ್ಸರ್) ರನ್‌ಗಳಿಸಿದ್ರು. 167 ರನ್‌ಗಳ ಗುರಿ ಬೆನ್ನತ್ತಿದ್ದ ಜಿಂಬಾಬ್ವೆ ಕೇವಲ 125 ರನ್‌ಗಳಿಸುವ ಮೂಲಕ ಟೀಂ ಇಂಡಿಯಾ ಮುಂದೆ ಸೋಲೊಪ್ಪಿಕೊಂಡಿದೆ.

### ಭಾರತ ಬೌಲರ್ಸ್‌ಗಳ ಅಬ್ಬರ!

ಇದಾದ ಬಳಿಕ ನಾಯಕ ಸಿಕಂದರ್ ರಾಝಾ ರನ್ ಔಟ್ ಆದರು. ಶಿವಂ ದುಬೆ ಜೊನಾಥನ್ ಕ್ಯಾಂಪ್‌ಬೆಲ್ ಅವರ ವಿಕೆಟ್ ಅನ್ನು ಸಹ ಪಡೆದುಕೊಂಡ್ರು. ತುಷಾರ್ ದೇಶಪಾಂಡೆ ಬ್ರಾಂಡನ್ ಮಾವುಟಾ ಅವರ ವಿಕೆಟ್ ಪಡೆದುಕೊಂಡ್ರು. ಐದನೇ ಮತ್ತು ಅಂತಿಮ ಟಿ20 ಪಂದ್ಯದಲ್ಲಿ ಭಾರತ 42 ರನ್‌ಗಳಿಂದ ಜಿಂಬಾಬ್ವೆಯನ್ನು ಸೋಲಿಸಿತು. 168 ರನ್‌ಗಳ ಗುರಿ ಬೆನ್ನತ್ತಿದ ಜಿಂಬಾಬ್ವೆ ತಂಡ 125 ರನ್‌ಗಳಿಗೆ ಸೀಮಿತವಾಯಿತು.

ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿ ಬರೋಬ್ಬರಿ 12 ರನ್ ಕಲೆಹಾಕಿದ ಯಶಸ್ವಿ ಜೈಸ್ವಾಲ್, ಅಂತಾರಾಷ್ಟ್ರೀಯ ಕ್ರಿಕೆಟ್‌ನ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿ ಇಷ್ಟು ರನ್ ಕಲೆಹಾಕಿದ ಮೊದಲ ಬ್ಯಾಟರ್ ಎಂಬ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಅದಾಗ್ಯೂ, ಜೈಸ್ವಾಲ್ ಅವರ ಈ ಸಿಡಿಲಬ್ಬರದ ಬ್ಯಾಟಿಂಗ್ ಹೆಚ್ಚು ಹೊತ್ತು ಉಳಿಯಲಿಲ್ಲ.



ಪ್ರಸ್ತುತ ಜಿಂಬಾಬ್ವೆ ಪ್ರವಾಸದಲ್ಲಿರುವ ಟೀಂ ಇಂಡಿಯಾ 5 ಪಂದ್ಯಗಳ ಟಿ20 ಸರಣಿಯಲ್ಲಿ ನಿರತವಾಗಿದೆ. ಸರಣಿಯಲ್ಲಿ ಈಗಾಗಲೇ 4 ಪಂದ್ಯಗಳು ಮುಗಿದಿದ್ದು, 3-1 ಅಂತರದಲ್ಲಿ ಟೀಂ ಇಂಡಿಯಾ ಸರಣಿಯನ್ನು ಕೈವಶಪಡಿಸಿಕೊಂಡಿದೆ. ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಸರಣಿಯ ಅಂತಿಮ ಹಾಗೂ ಐದನೇ ಪಂದ್ಯ ನಡೆಯುತ್ತಿದೆ. ಈ ಪಂದ್ಯದಲ್ಲಿ ಜಿಂಬಾಬ್ವೆ ನಾಯಕ ಸಿಕಂದರ್ ರಾಝಾ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಅದರಂತೆ ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಇಳಿದ ಯಶಸ್ವಿ ಜೈಸ್ವಾಲ್ ತಾನು ಎದುರಿಸಿದ ಮೊದಲ ಎಸೆತದಲ್ಲೇ ಬರೋಬ್ಬರಿ 12 ರನ್ ಕಲೆಹಾಕಿ ವಿಶ್ವ ದಾಖಲೆ ಸೃಷ್ಟಿಸಿದ್ದಾರೆ.



### ಮೊದಲ ಎಸೆತದಲ್ಲಿ 12 ರನ್

ವಾಸ್ತವವಾಗಿ ಜಿಂಬಾಬ್ವೆ ಪರ ಇನ್ನಿಂಗ್ಸ್‌ನ ಮೊದಲ ಓವರ್ ಬೌಲ್ ಮಾಡುವ ಜವಾಬ್ದಾರಿಯನ್ನು ನಾಯಕ ಸಿಕಂದರ್ ರಾಝಾ ಹೊತ್ತುಕೊಂಡರು. ಆ ಓವರ್‌ನ ಮೊದಲ ಎಸೆತ ನೋ ಬಾಲ್ ಆಗಿತ್ತು. ಸ್ಟ್ರೈಕ್‌ನಲ್ಲಿದ್ದ ಯಶಸ್ವಿ ಜೈಸ್ವಾಲ್ ಆ ಎಸೆತದಲ್ಲಿ ಭರ್ಜರಿ ಸಿಕ್ಸರ್ ಬಾರಿಸಿದರು. ಇದಾದ ನಂತರ ಜೈಸ್ವಾಲ್ ತಮ್ಮ ಮುಂದಿನ ಎಸೆತದಲ್ಲೂ ಸಿಕ್ಸರ್ ಬಾರಿಸಿದರು. ಇದರೊದಿಗೆ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿ ಬರೋಬ್ಬರಿ 12 ರನ್ ಕಲೆಹಾಕಿದ ಯಶಸ್ವಿ ಜೈಸ್ವಾಲ್, ಅಂತಾರಾಷ್ಟ್ರೀಯ ಕ್ರಿಕೆಟ್‌ನ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿ ಇಷ್ಟು ರನ್ ಕಲೆಹಾಕಿದ ಮೊದಲ ಬ್ಯಾಟರ್ ಎಂಬ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಅದಾಗ್ಯೂ, ಜೈಸ್ವಾಲ್ ಅವರ ಈ ಸಿಡಿಲಬ್ಬರದ ಬ್ಯಾಟಿಂಗ್ ಹೆಚ್ಚು ಹೊತ್ತು ಉಳಿಯಲಿಲ್ಲ. ಅವರು ಮೊದಲ ಓವರ್‌ನ ನಾಲ್ಕನೇ ಎಸೆತದಲ್ಲೇ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ ಸೇರಿಕೊಳ್ಳಬೇಕಾಯಿತು.

### ಜಿಂಬಾಬ್ವೆ ಆರಂಭಿಕ ಆಘಾತ!

**ಜಿಂಬಾಬ್ವೆ ತಂಡ 168 ರನ್‌ಗಳ ಗುರಿಯನ್ನು ಬೆನ್ನಟ್ಟಲು ಹೊರಟಿತ್ತು. ಮುಖೇಶ್ ಕುಮಾರ್ ಮೊದಲ ಓವರ್‌ನಲ್ಲೇ ಶಾಕ್ ನೀಡಿದ್ದು ವೆಸ್ಲಿ ಮಾಧೆವೆರೆ ಖಾತೆ ತೆರೆಯದೆ ಔಟಾಗಿದ್ದಾರೆ. ಯಾನ್ ಬೆನೆಟ್ 10 ರನ್ ಗಳಿಸಿ ಔಟಾದರು. ಟಿ ಮರುಮಣಿ 27 ರನ್ ಗಳಿಸಿ ಔಟಾದರು. ವಾಷಿಂಗ್ಟನ್ ಸುಂದರ್ 9ನೇ ಓವರ್‌ನಲ್ಲಿ ಮರುಮಣಿ ವಿಕೆಟ್ ಪಡೆದರು. ಶಿವಂ ದುಬೆ, ಡಿಯೋನ್ ಮೈಯರ್ಸ್ ಅವರ ವಿಕೆಟ್ ಪಡೆದುಕೊಂಡ್ರು.**

# ರೋಹಿತ್ ಶರ್ಮಾಗೆ ನಾಯಕತ್ವ ಪಟ್ಟ ಕಟ್ಟಿದ್ದು ನಾನು

ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಅವರು ವಿರಾಟ್ ಕೊಹ್ಲಿಯನ್ನು ಏಕದಿನ ನಾಯಕತ್ವದಿಂದ ತೆಗೆದುಹಾಕಿ ರೋಹಿತ್ ಶರ್ಮಾ ಅವರನ್ನು ಆ ಸ್ಥಾನಕ್ಕೆ ನೇಮಿಸಿದ್ದರು. ಅದು ಆ ಸಮಯಕ್ಕೆ ದಿಟ್ಟ ನಿರ್ಧಾರವಾಗಿತ್ತು. ಜತೆಗೆ ಟೀಕೆಗಳನ್ನೂ ಎದುರಿಸಿದ್ದರು. 2022 ರಲ್ಲಿ ಭಾರತದ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಮುಂಚಿತವಾಗಿ ಪತ್ರಿಕಾಗೋಷ್ಠಿ ನಡೆಸಿ ವಿಷಯವನ್ನು ಬಹಿರಂಗಪಡಿಸಿದ್ದರು. ಅವರು ಈ ಕ್ರಮಕ್ಕಾಗಿ ಭಾರಿ ಟೀಕೆಗೆ ಒಳಗಾದರು. ಆ ಸಮಯದಲ್ಲಿ, 52 ವರ್ಷದ ಗಂಗೂಲಿ ಇದು ಸೂಕ್ತ ನಿರ್ಧಾರ ಎಂದು ಹೇಳಿದ್ದರು. ಆದರೆ ಕೊಹ್ಲಿ ನಂತರ ಇನ್ನೊಂದು ಕತೆಯನ್ನು ಹೇಳಿದ್ದರು.

ತಮ್ಮನ್ನು ಬೇಕಂತಲೇ ತೆಗೆದುಹಾಕಿದ್ದಾರೆ ಎಂದು ಹೇಳಿದ್ದರು. ಇತ್ತೀಚಿನವರೆಗೂ ಭಾರತವು ಟಿ 20 ವಿಶ್ವಕಪ್ ಗೆಲ್ಲುವವರೆಗೂ ಗಂಗೂಲಿ ಈ ವಿಷಯದ ಬಗ್ಗೆ ಮಾತನಾಡಲಿಲ್ಲ. ಪಂದ್ಯಾವಳಿಯಲ್ಲಿ ಮೆನ್ ಇನ್ ಬ್ಲೂ ಯಶಸ್ಸಿನ ನಂತರ ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ. ರೋಹಿತ್ ಅವರನ್ನು ನಾಯಕನನ್ನಾಗಿ ಮಾಡಿದ್ದು ನಾನೇ ಎಂದು ಹೇಳಿದ್ದಾರೆ. ಏಕೆಂದರೆ ರೋಹಿತ್ ಅಂತಿಮವಾಗಿ 11 ವರ್ಷಗಳ ನಂತರ ಭಾರತಕ್ಕೆ ಐಸಿಸಿ ಟ್ರೋಫಿಯನ್ನು ತಂದಿದ್ದಾರೆ. ಈ ಕ್ರಮಕ್ಕಾಗಿ ಅವರನ್ನು ಆಗ ಟೀಕಿಸಲಾಗಿದೆ. ಆದರೆ ಈಗ ಯಾರೂ ತಮ್ಮ ನಿರ್ಧಾರವನ್ನು ನೆನಪಿಸಿಕೊಳ್ಳುವುದಿಲ್ಲ ಎಂದು ಗಂಗೂಲಿ ಹೇಳಿದ್ದಾರೆ. ನಾನು ರೋಹಿತ್ ಶರ್ಮಾಗೆ ಭಾರತ ತಂಡದ ನಾಯಕತ್ವವನ್ನು ಹಸ್ತಾಂತರಿಸಿದಾಗ ಎಲ್ಲಾರೂ ನನ್ನನ್ನು ಟೀಕಿಸಿದರು. ಈಗ ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ಟಿ 20 ವಿಶ್ವಕಪ್ ಗೆದ್ದಿದೆ. ಎಲ್ಲಾರೂ ನನ್ನನ್ನು ನಿಂದಿಸುವುದನ್ನು ನಿಲ್ಲಿಸಿದ್ದಾರೆ. ವಾಸ್ತವವಾಗಿ, ಅವರನ್ನು ಭಾರತೀಯ ತಂಡದ ನಾಯಕನನ್ನಾಗಿ ನೇಮಿಸಿದ್ದು ನಾನು ಎಂಬುದನ್ನು ಎಲ್ಲಾರೂ ಮರೆತಿದ್ದಾರೆ ಎಂದೇ ಭಾವಿಸುತ್ತೇನೆ'' ಎಂದು ಗಂಗೂಲಿ ಬಂಗಾಳಿ ದಿನಪತ್ರಿಕೆಯೊಂದಕ್ಕೆ ಹೇಳಿದ್ದಾರೆ.

**ಎಲ್ಲರೂ ಮರೆತಿದ್ದಾರೆ ಎಂದ ಗಂಗೂಲಿ**



ರಿಕಿ ಪಾಂಟಿಂಗ್ ಡೆಲ್ಲಿ ಕ್ಯಾಪಿಟಲ್ಸ್ ತಂಡದಿಂದ ಬೇರ್ಪಟ್ಟಿದ್ದಾರೆ. ಗಂಗೂಲಿ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಳ್ಳುವ ಬಯಕೆ ವ್ಯಕ್ತಪಡಿಸಿದ್ದಾರೆ. ಸೆಟಪ್‌ಗೆ ಕೆಲವು ಹೊಸ ಆಟಗಾರರನ್ನು ಕರೆತರುವುದಾಗಿ ಅವರು ಉಲ್ಲೇಖಿಸಿದ್ದಾರೆ. ಇಂಗ್ಲೆಂಡ್‌ನ ಜೇಮಿ ಸ್ಮಿತ್ ಅವರನ್ನು ಪಾದಾರ್ಪಣೆ ಮಾಡುವ ಯೋಚನೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಮುಂದಿನ ಐಪಿಎಲ್‌ಗೆ ಯೋಜಿಸುತ್ತಿದ್ದೇನೆ. ಈ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ಗೆಲ್ಲಬೇಕೆಂದು ನಾನು ಬಯಸುತ್ತೇನೆ. ಭಾರತೀಯರನ್ನು ಮುಖ್ಯ ಕೋಚ್ ಆಗಿ ನೇಮಿಸುವ ಬಗ್ಗೆ ನಾನು ಮ್ಯಾನೇಜ್ಮೆಂಟ್ ಬಗ್ಗೆ ಮಾತನಾಡುತ್ತೇನೆ.

ನಾನು ಮುಖ್ಯ ತರಬೇತುದಾರನಾಗಿ ಒಂದು ಬದಲಾವಣೆ ನೀಡಲು ಬಯಸುತ್ತೇನೆ. ನಾನು ಕೆಲವು ಹೊಸ ಆಟಗಾರರನ್ನು ಕರೆತರುತ್ತೇನೆ. ಇಂಗ್ಲೆಂಡ್‌ನಿಂದ ಜೇಮಿ ಸ್ಮಿತ್ ಅವರನ್ನು ಕರೆತರಲು ಬಯಸಿದ್ದೆ ಎಂದು ಗಂಗೂಲಿ ಹೇಳಿದ್ದಾರೆ.

# ಬಪ್ಪನಾಡು ದುರ್ಗಾಪರಮೇಶ್ವರಿ ದೇಗುಲಕ್ಕೆ ಕ್ರಿಕೆಟಿಗ ಕೆ. ಎಲ್ ರಾಹುಲ್

ಭಾರತ ತಂಡದ ಬಲಗೈ ಬ್ಯಾಟರ್ ಹಾಗೂ ಸ್ಟಾರ್ ಆಟಗಾರ ಕೆ.ಎಲ್ ರಾಹುಲ್ ಇಲ್ಲಿನ ಐತಿಹಾಸಿಕ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರಕ್ಕೆ ಭಾನುವಾರ ಭೇಟಿ ನೀಡಿದ್ದಾರೆ. ಪತ್ನಿ ಅತಿಯಾ ಶೆಟ್ಟಿ ಅವರ ಜತೆ ದೇಗುಲಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ನೆರವೇರಿಸಿದರು. ಬಪ್ಪನಾಡು ಕ್ಷೇತ್ರವು ಮಂಗಳೂರು ನಗರದ ಹೊರವಲಯದ ಮುಲ್ಕಿ ಸಮೀಪ ಇದೆ. ದೇಗುಲಕ್ಕೆ ಭೇಟಿ ನೀಡಿದ ದಂಪತಿಗೆ ದೇವಾಲಯದ ವತಿಯಿಂದ ವಿಶೇಷ ಗೌರವ ಸಲ್ಲಿಸಲಾಯಿತು.

ವಿಶ್ವಕಪ್ ತಂಡದಲ್ಲಿ ಅವಕಾಶ ಪಡೆಯದೇ ಕೆ. ಎಲ್ ರಾಹುಲ್ ಮುಂಬರುವ ಶ್ರೀಲಂಕಾ ಪ್ರವಾಸದಲ್ಲಿ ಭಾರತ ತಂಡ ಸೇರುವ ನಿರೀಕ್ಷೆಯಿದೆ. ಆದರೆ ಅದಿನ್ನೂ ಸ್ಪಷ್ಟವಾಗಿಲ್ಲ. ತಂಡವೂ ಪ್ರಕಟಗೊಂಡಿಲ್ಲ. ಅವಕಾಶದ ನಿರೀಕ್ಷೆಯಲ್ಲಿರುವ ಅವರೀಗ ಅಮೂಲ್ಯ ಸಮಯವನ್ನು ಕುಟುಂಬದ ಜತೆ ಕಳೆಯುತ್ತಿದ್ದಾರೆ. ಎರಡು ದಿನಗಳ ಹಿಂದೆಯಷ್ಟೇ ಅನಂತ್ ಅಂಬಾನಿ ಮದುವೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.




ದಂಪತಿ ಜತೆಯಾಗಿ ಭಾಗಿಯಾಗಿದ್ದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡಿದ್ದವು. ಜಿಂಬಾಬ್ವೆ ಪ್ರವಾಸದ ಬಳಿಕ ಟೀಮ್ ಇಂಡಿಯಾ ತನ್ನ ಮುಂದಿನ ಕಾರ್ಯಯೋಜನೆಗೆ ಸಜ್ಜಾಗಬೇಕಾಗಿದೆ ವೈಟ್-ಬಾಲ್ ಸರಣಿಗಾಗಿ ಭಾರತ ಬಳಗ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದೆ. ಹೊಸ ಕೋಚ್ ಗೌತಮ್ ಗಂಭೀರ್ ಅಡಿಯಲ್ಲಿ ಈ ತಂಡ ದ್ವೀಪ ರಾಷ್ಟ್ರಕ್ಕೆ ಹೋಗಲಿದೆ.



ಈ ಸರಣಿಯಲ್ಲಿ ಯಾರೆಲ್ಲ ಇರುತ್ತಾರೆ ಎಂಬ ಬಗ್ಗೆ ಇನ್ನೂ ಮಾಹಿತಿ ಇಲ್ಲ. ಆದರೆ, ವರದಿಗಳ ಪ್ರಕಾರ, ಸ್ಟಾರ್ ಬ್ಯಾಟರ್ ಹಾಗೂ ಕನ್ನಡಿಗ ಕೆಎಲ್ ರಾಹುಲ್ ತಂಡಕ್ಕೆ ಮರಳಲಿದ್ದು ತಂಡವನ್ನು ಮುನ್ನಡೆಸುವ ನಿರೀಕ್ಷೆಯಿದೆ.

ಏಕದಿನ ಸರಣಿಯಿಂದ ರೋಹಿತ್ ಶರ್ಮಾಗೆ ವಿಶ್ರಾಂತಿ ನೀಡಲಾಗಿದ್ದು, ವಿರಾಟ್ ಕೊಹ್ಲಿಗೂ ವಿಶ್ರಾಂತಿ ನೀಡಲಾಗಿದೆ ಎಂದು ವರದಿಯಾಗಿದೆ. ಈ ಸರಣಿಯು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಅಡಿಯಲ್ಲಿ ತಂಡಕ್ಕೆ ಮೊದಲನೆಯದು ಶ್ರೀಲಂಕಾ ಸವಾಲು. ಹೀಗಾಗಿ ಈ ಸರಣಿಯಲ್ಲಿ ಭಾರತವನ್ನು ಮುನ್ನಡೆಸಲು ಕೆಎಲ್ ರಾಹುಲ್ ಮುಂಚೂಣಿಯಲ್ಲಿ ಆಯ್ಕೆಯಾಗಿದ್ದಾರೆ. ಕೆಎಲ್ ರಾಹುಲ್ ಟಿ 20 ವಿಶ್ವಕಪ್ ಗೆ ಹೋಗಿದ್ದ ಭಾರತದ ತಂಡದಿಂದ ಹೊರಗುಳಿದಿದ್ದರು. ಆದರೆ ಈಗ ಶ್ರೀಲಂಕಾ ಪ್ರವಾಸದ ಏಕದಿನ ಹಂತದಲ್ಲಿ ಕಾಣಿಸಿಕೊಳ್ಳಲು ಸಜ್ಜಾಗಿದ್ದಾರೆ. ನಾಯಕತ್ವದ ಪಾತ್ರವನ್ನು ಸಹ ತೆಗೆದುಕೊಳ್ಳಲಿದ್ದಾರೆ.



# ಕಾಲಿಗೆ ನಮಸ್ಕರಿಸಲು ಬಂದ ತಲೈವಾ

ವಿಶ್ವದ ಶ್ರೀಮಂತರಲ್ಲಿ ಒಬ್ಬರಾಗಿರುವ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಮದುವೆ ಜು.12ರಂದು ಅದ್ದೂರಿಯಾಗಿ ನಡೆದಿದೆ. ಇನ್ನೂ ಈ ಸಂಭ್ರಮದಲ್ಲಿ ಭಾಗಿಯಾಗಿದ್ದ ಅಮಿತಾಭ್ ಬಚ್ಚನ್‌ರನ್ನು ನೋಡಿ ಕಾಲಿಗೆ ನಮಸ್ಕರಿಸಲು ತಲೈವಾ ಬಂದಿದ್ದು, ಈ ವೇಳೆ ಬಿಗ್ ಬಿ ಪ್ರತಿಕ್ರಿಯಿಸಿದ ರೀತಿ ಕಂಡು ಫ್ಯಾನ್ಸ್ ಮೆಚ್ಚುಗೆ ಸೂಚಿಸಿದ್ದಾರೆ. ರಜನಿಕಾಂತ್ ಸೂಪರ್ ಸ್ಟಾರ್ ಆಗಿದ್ರೂ ತಮಗಿಂತ ಹಿರಿಯರಿಗೆ ಅದೆಷ್ಟು ಗೌರವ ಕೊಡ್ತಾರೆ ಎಂಬುದಕ್ಕೆ ಈ ವಿಡಿಯೋ ಸಾಕ್ಷಿಯಾಗಿದೆ. ಅಂಬಾನಿ ಮದುವೆಯಲ್ಲಿ ಸೀನಿಯರ್ ಸ್ಟಾರ್ ನಟ ಬಿಗ್ ಬಿ ನೋಡ್ತಿದ್ದಂತೆ ತಲೈವಾ ಕಾಲಿಗೆ ನಮಸ್ಕರಿಸಲು ಮುಂದಾಗಿದ್ದಾರೆ. ಆಗ ಬಿಗ್ ಬಿ ತಡೆದಿದ್ದಾರೆ. ಇಬ್ಬರೂ ಪರಸ್ಪರ ತಬ್ಬಿಕೊಂಡಿದ್ದಾರೆ. ಈ ವಿಡಿಯೋ ಮೂಲಕ ಇಬ್ಬರೂ ಪರಸ್ಪರ ಅದೆಷ್ಟು ಗೌರವ ಕೊಡ್ತಾರೆ ಎಂದು ತಿಳಿದು ಬಂದಿದೆ.

ಅನಂತ್ ಮತ್ತು ರಾಧಿಕಾ ಮದುವೆಯಲ್ಲಿ ಬಿಗ್ ಬಿ ಫ್ಯಾಮಿಲಿ, ರಜನಿಕಾಂತ್ ಕುಟುಂಬ, ಯಶ್ ದಂಪತಿ, ರಶ್ಮಿಕಾ ಮಂದಣ್ಣ, ರಣ್‌ವೀರ್ ಸಿಂಗ್, ದೀಪಿಕಾ ಪಡುಕೋಣೆ, ಶಾರುಖ್ ಖಾನ್, ಜಾನ್ವಿ ಕಪೂರ್, ಸಲ್ಮಾನ್ ಖಾನ್, ಕಿಯಾರಾ ಅಡ್ವಾಣಿ ದಂಪತಿ ಸೇರಿದಂತೆ ಅನೇಕರು ಭಾಗಿಯಾಗಿ ಸಂಭ್ರಮಿಸಿದ್ದಾರೆ.



# ಕುಟುಂಬದ ಜೊತೆ ನಿಲ್ಲದೆ ಮಗಳೊಂದಿಗೆ ಪೋಸ್ ಕೊಟ್ಟ ಐಶ್ವರ್ಯಾ ರೈ

ಕರಾವಳಿ ಬ್ಯೂಟಿ ಐಶ್ವರ್ಯಾ ರೈ ದಾಂಪತ್ಯ ಬಗ್ಗೆ ಮತ್ತೆ ಗುಸು ಗುಸು ಶುರುವಾಗಿದೆ. ಬಚ್ಚನ್ ಪರಿವಾರದ ಜೊತೆ ಐಶ್ವರ್ಯಾ ಸಂಬಂಧ ಸರಿಯಿಲ್ಲ ಎಂದು ಮತ್ತೆ ಚರ್ಚೆಯಾಗುತ್ತಿದೆ. ಅಂಬಾನಿ ಮನೆ ಮಗನ ಮದುವೆಯಲ್ಲಿ ಫ್ಯಾಮಿಲಿ ಜೊತೆ ಅಭಿಷೇಕ್ ಬಚ್ಚನ್ ಹಾಜರಿ ಹಾಕಿದ್ದರು. ಕುಟುಂಬದ ಜೊತೆ ಕಾಣಿಸಿಕೊಳ್ಳದೇ ಪ್ರತ್ಯೇಕವಾಗಿ ಮಗಳೊಂದಿಗೆ ಕ್ಯಾಮೆರಾಗೆ ನಟಿ ಪೋಸ್ ಕೊಟ್ಟಿದ್ದಾರೆ. ಇದು ನೆಟ್ಟಿಗರ ಡಿವೋರ್ಸ್ ಅನುಮಾನಕ್ಕೆ ತುಪ್ಪ ಸುರಿದಂತೆ ಆಗಿದೆ. ಬಾಲಿವುಡ್‌ನ ಬೆಸ್ಟ್ ಜೋಡಿಗಳಲ್ಲಿ ಒಂದಾಗಿರುವ ಐಶ್ವರ್ಯಾ ರೈ ಮತ್ತು ಅಭಿಷೇಕ್ ಬಚ್ಚನ್ ವೈವಾಹಿಕ ಜೀವನದಲ್ಲಿ ಬಿರುಕಾಗಿದೆ ಎಂದು ಕೆಲ ತಿಂಗಳುಗಳಿಂದ ಹರಿದಾಡುತ್ತಿದೆ. ಇದೀಗ ನಡೆದಿರುವ ಘಟನೆ ಡಿವೋರ್ಸ್ ವಿಚಾರಕ್ಕೆ ಮತ್ತಷ್ಟು ಪುಷ್ಠಿ ನೀಡಿದೆ. ಅಂಬಾನಿ ಮಗನ ಮದುವೆಯಲ್ಲಿ ಅಮಿತಾಭ್, ಜಯಾ ಬಚ್ಚನ್, ಮಗಳು ಶ್ವೇತಾ ಮತ್ತು ಅವರ ಮಕ್ಕಳ ಜೊತೆ ಅಭಿಷೇಕ್ ಬಚ್ಚನ್ ಪಾಪರಾಜಿಗಳ ಕ್ಯಾಮೆರಾಗೆ ಪೋಸ್ ಕೊಟ್ಟಿದ್ದಾರೆ. ಆದರೆ ನಟಿ ಐಶ್ವರ್ಯಾ ರೈ ಕುಟುಂಬದ ಜೊತೆ ಕಾಣಿಸಿಕೊಳ್ಳದೇ ಪ್ರತ್ಯೇಕವಾಗಿ ಮಗಳು ಆರಾಧ್ಯ ಜೊತೆ ಕ್ಯಾಮೆರಾ ಪೋಸ್ ನೀಡಿದ್ದಾರೆ.

# ಬಾಲಿವುಡ್ ಸಿನಿಮಾಕ್ಕೆ ಶ್ರೀಲೀಲಾ

ಕನ್ನಡತಿ ಶ್ರೀಲೀಲಾ ಇದೀಗ ಬಾಲಿವುಡ್ ಅಂಗಳಕ್ಕೆ ಲಗ್ಗೆ ಇಟ್ಟಿದ್ದಾರೆ. ತೆಲುಗು ಸಿನಿಮಾಗಳ ಜೊತೆ ಬಾಲಿವುಡ್‌ನಲ್ಲಿಯೂ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ವರುಣ್ ಧವನ್ ಜೊತೆ ನಟಿ ಸಿನಿಮಾ ಮಾಡ್ತಾರೆ ಎಂದು ಸುದ್ದಿ ವೈರಲ್ ಆಗಿತ್ತು. ಬಳಿಕ ಏನಾಯ್ತು ಎಂದು ಮಾಹಿತಿ ಸಿಕ್ಕಿರಲಿಲ್ಲ. ಇದೀಗ ನಟಿಯ ಚೊಚ್ಚಲ ಹಿಂದಿ ಸಿನಿಮಾ ಬಗ್ಗೆ ಮಾಹಿತಿ ಸಿಕ್ಕಿದೆ. ಹೊಸ ಸಿನಿಮಾದಲ್ಲಿ ವರುಣ್ ಧವನ್, ಮೃಣಾಲ್ ಠಾಕೂರ್ ಜೊತೆ ಶ್ರೀಲೀಲಾ ಕೂಡ ಲೀಡ್ ರೋಲ್‌ನಲ್ಲಿ ಕಾಣಿಸಿಕೊಳ್ತಿದ್ದಾರೆ. ಇದೇ ಜುಲೈ ಅಂತ್ಯದಿಂದ ಸಿನಿಮಾ ಶೂಟಿಂಗ್ ಶುರುವಾಗಲಿದೆ.

ಕನ್ನಡತಿ ಶ್ರೀಲೀಲಾ ಇದೀಗ ಬಾಲಿವುಡ್ ಅಂಗಳಕ್ಕೆ ಲಗ್ಗೆ ಇಟ್ಟಿದ್ದಾರೆ. ತೆಲುಗು ಸಿನಿಮಾಗಳ ಜೊತೆ ಬಾಲಿವುಡ್‌ನಲ್ಲಿಯೂ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ವರುಣ್ ಧವನ್ ಜೊತೆ ನಟಿ ಸಿನಿಮಾ ಮಾಡ್ತಾರೆ ಎಂದು ಸುದ್ದಿ ವೈರಲ್ ಆಗಿತ್ತು. ಬಳಿಕ ಏನಾಯ್ತು ಎಂದು ಮಾಹಿತಿ ಸಿಕ್ಕಿರಲಿಲ್ಲ. ಇದೀಗ ನಟಿಯ ಚೊಚ್ಚಲ ಹಿಂದಿ ಸಿನಿಮಾ ಬಗ್ಗೆ ಮಾಹಿತಿ ಸಿಕ್ಕಿದೆ. ವರುಣ್ ಧವನ್‌ಗೆ ಜೋಡಿಯಾಗಿ ಶ್ರೀಲೀಲಾ, ಮೃಣಾಲ್ ಠಾಕೂರ್ ನಟಿಸುತ್ತಿರುವ ಕಾರಣ ಸಿನಿಮಾ ಬಗ್ಗೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ. ಹಾಟ್ ಹುಡುಗಿಯರ ಜೊತೆ ವರುಣ್ ರೊಮ್ಯಾನ್ಸ್ ನೋಡಲು ಫ್ಯಾನ್ಸ್ ಕಾಯ್ತಿದ್ದಾರೆ. ಅಂದಹಾಗೆ, ನಿತಿನ್ ಜೊತೆ ರಾಬಿನ್‌ಹುಡ್, ಪವನ್ ಕಲ್ಯಾಣ್ ಜೊತೆಗಿನ ಸಿನಿಮಾ ಸೇರಿದಂತೆ ಹಲವು ಪ್ರಾಜೆಕ್ಟ್‌ಗಳಲ್ಲಿ ಶ್ರೀಲೀಲಾ ಬ್ಯುಸಿಯಾಗಿದ್ದಾರೆ.





# ಕಿರುತೆರೆಗೆ ಮಳೆ ಹುಡುಗಿ ಎಂಟ್ರಿ

ಮುಂಗಾರು ಮಳೆ' ನಟಿ ಪೂಜಾ ಗಾಂಧಿ ಅಭಿಮಾನಿಗಳಿಗೆ ಸಿಹಿಸುದ್ದಿ ಕೊಟ್ಟಿದ್ದಾರೆ. ಮತ್ತೆ ನಟನೆಗೆ ಮರಳಿದ್ದಾರೆ. 'ನಿನಗಾಗಿ' ಎನ್ನುತ್ತಾ ಪೂಜಾ ಗಾಂಧಿ ಟಿವಿ ಪರದೆಗೆ ಎಂಟ್ರಿ ಕೊಟ್ಟಿದ್ದಾರೆ. ಸಿನಿಮಾ ನಟಿಯ ಕಥೆ ಹೊಂದಿರುವ 'ನಿನಗಾಗಿ' ಸೀರಿಯಲ್‌ನಲ್ಲಿ ಸೂಪರ್ ಸ್ಟಾರ್ ರಚನಾ ಎಂಬ ಪಾತ್ರದಲ್ಲಿ 'ಬಿಗ್ ಬಾಸ್' ಖ್ಯಾತಿಯ ದಿವ್ಯಾ ಉರುಡುಗ ನಟಿಸುತ್ತಿದ್ದಾರೆ. ಈ ಧಾರಾವಾಹಿಯಲ್ಲಿ ಕಿಶನ್ ಬಿಳಗಲಿ ಕೂಡ ನಟಿಸುತ್ತಿದ್ದಾರೆ. ಸಾಕಷ್ಟು ತಿರುವು ಪಡೆದು ಮುನ್ನುಗ್ಗುತ್ತಿರುವ ಈ ಸೀರಿಯಲ್‌ಗೆ ಪೂಜಾ ಗಾಂಧಿ ವಿಶೇಷ ಪಾತ್ರವೊಂದಕ್ಕೆ ಜೀವ ತುಂಬಿದ್ದಾರೆ. ಸದ್ಯ



ಪೂಜಾ ಗಾಂಧಿ ಜೊತೆಗಿನ ಸುಂದರ ಫೋಟೋಗಳನ್ನು ದಿವ್ಯಾ ಉರುಡುಗ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. 'ಮುದ್ದು ಕನ್ನಡತಿ' ಎಂದು ದಿವ್ಯಾ ಕ್ಯಾಪ್ಷನ್ ನೀಡಿದ್ದಾರೆ. ಈ ಸೀರಿಯಲ್‌ನಲ್ಲಿ ನಟಿಸುತ್ತಿರುವ ಸಹಕಲಾವಿದರು ಕೂಡ ಫೋಟೋಗೆ ಪೋಸ್ ಕೊಟ್ಟಿದ್ದಾರೆ. ಈ ಪೋಸ್ಟ್ ನೋಡಿ ಬಳಿಕ ಎಪಿಸೋಡ್ ನೋಡಲು ಕಾತರದಿಂದ ಕಾಯ್ತಿದ್ದಾರೆ ಅಭಿಮಾನಿಗಳು. ಅಂದಹಾಗೆ, ಮುಂಗಾರು ಮಳೆ, ಮಿಲನಾ, ಕೃಷ್ಣ, ಅನು, ತಾಜ್‌ಮಹಲ್ ಸೇರಿದಂತೆ ಹಲವು ಸಿನಿಮಾಗಳಲ್ಲಿ ಪೂಜಾ ಗಾಂಧಿ ನಟಿಸಿದ್ದಾರೆ. 'ಬಿಗ್ ಬಾಸ್ ಸೀಸನ್ 3'ರಲ್ಲಿ ಪೂಜಾ ಸ್ಪರ್ಧಿಯಾಗಿ ಕಾಣಿಸಿಕೊಂಡಿದ್ದರು.

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಅವರು ಅಂಬಾನಿ ಮನೆ ಮಗನ ಮದುವೆಯಲ್ಲಿ ಪುಷ್ಪರಾಜ್ ಸ್ಟೈಲಿನಲ್ಲಿ ಮಿಂಚಿದ್ದಾರೆ. ನಗು ನಗುತ್ತಲೇ ರೆಡ್ ಕಾರ್ಪೆಟ್‌ಗೆ ಶ್ರೀವಲ್ಲಿ ಎಂಟ್ರಿ ಕೊಟ್ಟಿದ್ದಾರೆ. ನಟಿಯ ಸುಂದರ ಫೋಟೋಗಳು ಇದೀಗ ನೆಟ್ಟಿಗರ ಗಮನ ಸೆಳೆಯುತ್ತಿದೆ.

# ಪುಷ್ಪರಾಜ್ ಸ್ಟೈಲಿನಲ್ಲಿ ಮಿಂಚಿದ ರಶ್ಮಿಕಾ


ಅನಂತ್ ಮತ್ತು ರಾಧಿಕಾ ಮದುವೆ ಜು.12ರಂದು ಅದ್ದೂರಿಯಾಗಿ ನಡೆದಿದೆ. ಬಳಿಕ ಜು.13ರಂದು ಸಂಜೆ ನಡೆದ ಶುಭ ಆಶೀರ್ವಾದ್ ಕಾರ್ಯಕ್ರಮದಲ್ಲಿ ಬಾಲಿವುಡ್ ತಾರೆಯರ ದಂಡೇ ಭಾಗಿಯಾಗಿದೆ. ಇದರಲ್ಲಿ ಕನ್ನಡದ ನಟಿ ರಶ್ಮಿಕಾ ಮಂದಣ್ಣ ಹಾಜರಿ ಹಾಕಿದ್ದಾರೆ. ಈ ಕಾರ್ಯಕ್ರಮದ ರೆಡ್ ಕಾರ್ಪೆಟ್‌ನಲ್ಲಿ ನೀಲಿ ಬಣ್ಣದ ಸೀರೆಯುಟ್ಟು ರಶ್ಮಿಕಾ ಕಂಗೊಳಿಸಿದ್ದಾರೆ.

ಪಾಪರಾಜಿಗಳ ಮನವಿ ಮೇರೆಗೆ ಪುಷ್ಪರಾಜ್ ಸ್ಟೈಲ್ ಮಾಡಿ ಮುದ್ದಾದ ನಗು ಬೀರಿದ್ದಾರೆ. ಈ ವಿಡಿಯೋ ಈಗ ವೈರಲ್ ಆಗುತ್ತಿದೆ. ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಅವರು ಅಂಬಾನಿ ಮನೆ ಮಗನ ಮದುವೆಯಲ್ಲಿ ಪುಷ್ಪರಾಜ್ ಸ್ಟೈಲಿನಲ್ಲಿ ಮಿಂಚಿದ್ದಾರೆ. ನಗು ನಗುತ್ತಲೇ ರೆಡ್ ಕಾರ್ಪೆಟ್‌ಗೆ ಶ್ರೀವಲ್ಲಿ ಎಂಟ್ರಿ ಕೊಟ್ಟಿದ್ದಾರೆ.

# ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿದ ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ

ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಸದ್ಯ 'ಕಾಂತಾರ' ಚಾಪ್ಟರ್-1 ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ಇದರ ನಡುವೆ ಇತ್ತೀಚೆಗೆ 41ನೇ ವರ್ಷದ ಹುಟ್ಟುಹಬ್ಬವನ್ನು ಪತ್ನಿ ಪ್ರಗತಿ ಜೊತೆ ಅದ್ದೂರಿಯಾಗಿ ಆಚರಿಸಿಕೊಂಡಿದ್ದಾರೆ. ಬರ್ತ್‌ಡೇಯ ಸುಂದರ ಫೋಟೋಗಳನ್ನು ಇದೀಗ ಸೋಷಿಯಲ್ ಮೀಡಿಯಾದಲ್ಲಿ ರಿಷಬ್ ಹಂಚಿಕೊಂಡಿದ್ದಾರೆ.

ಜು.7ರಂದು ರಿಷಬ್ ಶೆಟ್ಟಿ ಹುಟ್ಟುಹಬ್ಬವಾಗಿದ್ದು, ಖಾಸಗಿ ಹೋಟೆಲ್‌ವೊಂದರಲ್ಲಿ ಅದ್ದೂರಿಯಾಗಿ ಬರ್ತ್‌ಡೇ ಸೆಲೆಬ್ರೇಟ್ ಮಾಡಿದ್ದಾರೆ. ಕತಡವಾಗಿ ನಟ ಹುಟ್ಟುಹಬ್ಬದ ಫೋಟೋ ಶೇರ್ ಮಾಡಿದ್ದಾರೆ. ಅಂದಹಾಗೆ, ಪತಿ ಹುಟ್ಟುಹಬ್ಬದಂದು ಪ್ರೀತಿಯಿಂದ ಪತ್ನಿ ಪ್ರಗತಿ ವಿಶೇಷವಾಗಿ ಶುಭಕೋರಿದ್ದರು. ನನ್ನ ಜೀವನದ ಆಧಾರಸ್ತಂಭಕ್ಕೆ ಜನ್ಮದಿನದ ಶುಭಾಶಯಗಳು. ನೀವು ಎಂತಹ ಅದ್ಭುತ ವ್ಯಕ್ತಿ ಎಂದು ನಾನು ಜಗತ್ತಿಗೆ ಹೇಳಲು ಬಯಸುತ್ತೇನೆ. ನಿಮ್ಮನ್ನು ನಿಜವಾಗಿಯೂ ತಿಳಿದಿರುವವರು ಅದೃಷ್ಟವಂತರು. ನಿಮ್ಮ ಶಕ್ತಿ, ಬುದ್ಧಿವಂತಿಕೆ ಮತ್ತು ಪ್ರೀತಿ ಪ್ರತಿದಿನ ನಮಗೆಲ್ಲರಿಗೂ ಸ್ಫೂರ್ತಿ ನೀಡುತ್ತದೆ ಎಂದು ಪ್ರಗತಿ ಶೆಟ್ಟಿ ಬಣ್ಣಿಸಿದ್ದಾರೆ. ನಾವು ಒಟ್ಟಿಗೆ ಇರುವುದಕ್ಕಾಗಿ ನಾನು ಪ್ರತಿದಿನ ದೇವರಿಗೆ ಕೃತಜ್ಞನಾಗಿದ್ದೇನೆ. ನಿಮಗೆ ಸಂತೋಷ, ಯಶಸ್ಸು ಮತ್ತು ಪ್ರಪಂಚದ ಎಲ್ಲಾ ಸಂತೋಷದಿಂದ ತುಂಬಿದ ವರ್ಷವಾಗಲಿ ಎಂದು ಹಾರೈಸಿದ್ದರು. ಈ ಪೋಸ್ಟ್ ನೋಡಿದ ಫ್ಯಾನ್ಸ್, ಜೋಡಿ ಅಂದರೆ ಹೀಗಿರಬೇಕು ಎಂದು ಮೆಚ್ಚುಗೆ ಸೂಚಿಸಿದ್ದರು. ರಿಕ್ಕಿ, ಕಿರಿಕ್ ಪಾರ್ಟಿ, ಸೇರಿದಂತೆ ಹಲವು ಚಿತ್ರಗಳಿಗೆ ನಿರ್ದೇಶನ ಮಾಡಿದ್ದಾರೆ. 'ಬೆಲ್ ಬಾಟಂ' ಚಿತ್ರದ ನಾಯಕ ನಟನಾಗಿ ಗೆದ್ದು ಬೀಗಿದ್ದರು. ಆದರೆ 'ಕಾಂತಾರ' ಸಿನಿಮಾದಲ್ಲಿ ನಟಿಸಿ, ನಿರ್ದೇಶನ ಮಾಡಿ ಸೆನ್ಸೇಷನ್ ಕ್ರಿಯೇಟ್ ಮಾಡಿದರು. ಪ್ಯಾನ್ ಇಂಡಿಯಾ ಸ್ಟಾರ್ ಆಗಿ ರಿಷಬ್ ಗುರುತಿಸಿಕೊಂಡರು. ಇದೀಗ 'ಕಾಂತಾರ' ಪ್ರೀಕ್ವೆಲ್ ಸಿನಿಮಾ ನೋಡಲು ಫ್ಯಾನ್ಸ್ ಕಾಯ್ತಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966